ಅಧ್ಯಾಯ 20

# ದೇವರ ವಾಗ್ದಾನಗಳು ಕಾಪಾಡಿಕೊಳ್ಳಲ್ಪಟ್ಟದ್ದು

20ನೇ ಅಧ್ಯಾಯದಲ್ಲಿ ಅಬ್ರಹಾಮ ಮತ್ತು ಸಾರಳು ಮತ್ತೊಂದಾವರ್ತಿ ಅಲೆದಾಡುವುದು ಕಂಡು ಬರುತ್ತದೆ. ಗೆರಾರಿನಲ್ಲಿ ನಡೆದ ಘಟನೆಗಳು 12ನೇ ಅಧ್ಯಾಯದೊಳಗೆ ಐಗುಪ್ತದಲ್ಲಿ ನಡೆದ ಘಟನೆಗಳಿಗೆ ವಿಚಿತ್ರವಾದ ಸಾಮ್ಯತೆಯನ್ನು ಹೊಂದಿರುತ್ತವೆ.

## ಅಬ್ರಹಾಮನ ಮೋಸತನ ಮತ್ತು ಅಬೀಮೆಲೆಕನ ಮುಗ್ಧತೆ (20:1-7)

**1ಅಬ್ರಹಾಮನು ಅಲ್ಲಿಂದ ಕಾನಾನ್ ದೇಶದ ದಕ್ಷಿಣ ಸೀಮೆಗೆ ಹೋಗುತ್ತಾ ಹೋಗುತ್ತಾ
ಕಾದೇಶಿಗೂ ಶೂರಿಗೂ ನಡುವೆ ವಾಸಮಾಡಿಕೊಂಡು ಕೆಲವು ಕಾಲ ಗೆರಾರಿನಲ್ಲಿ ಇದ್ದನು.
2ಅವನು ತನ್ನ ಹೆಂಡತಿಯಾದ ಸಾರಳನ್ನು ತಂಗಿಯೆಂದು ಹೇಳಿದನಾದ್ದರಿಂದ ಗೆರಾರಿನ
ಅರಸನಾದ ಅಬೀಮೆಲೆಕನು ಕರೇಕಳುಹಿಸಿ ಆಕೆಯನ್ನು ತನ್ನ ಮನೆಯಲ್ಲಿ ಸೇರಿಸಿಕೊಂಡನು.
3ಆದರೆ ರಾತ್ರಿಯಲ್ಲಿ ದೇವರು ಅಬೀಮೆಲೆಕನ ಕನಸಿನಲ್ಲಿ ಬಂದು - ನೀನು ಆ ಸ್ತ್ರೀಯನ್ನು
ಸೇರಿಸಿಕೊಂಡದರಿಂದ ಸಾಯತಕ್ಕವನಾಗಿದ್ದಿ; ಆಕೆ ಮುತ್ತೈದೆ ಅಂದನು. 4ಅಬೀಮೆಲೆಕನು
ಆಕೆಯನ್ನು ಕೂಡಲಿಲ್ಲವಾದ್ದರಿಂದ ಅವನು - ಸ್ವಾಮೀ, ನಿರಪರಾಧಿಯಾದ ಜನವನ್ನೂ
ನಾಶಮಾಡುವಿಯಾ? 5ಆ ಮನುಷ್ಯನು ಈಕೆ ತನಗೆ ತಂಗಿಯಾಗಬೇಕೆಂದು ತಾನೇ
ಹೇಳಲಿಲ್ಲವೇ. ಈಕೆಯೂ ಅವನು ತನಗೆ ಅಣ್ಣನಾಗಬೇಕೆಂದು ಹೇಳಿದಳು. ನಾನು
ಯಥಾರ್ಥಮನಸ್ಸಿನಿಂದಲೂ ಶುದ್ಧಹಸ್ತದಿಂದಲೂ ಇದನ್ನು ಮಾಡಿದೆನು ಅಂದನು. 6ಅದಕ್ಕೆ
ದೇವರು - ನೀನು ಇದನ್ನು ಯಥಾರ್ಥಮನಸ್ಸಿನಿಂದ ಮಾಡಿದೆ ಎಂಬುದನ್ನು ನಾನು ಬಲ್ಲೆ;
ಆದಕಾರಣ ನಾನಂತೂ ನೀನು ನನಗೆ ವಿರುದ್ಧವಾಗಿ ಪಾಪಮಾಡದಂತೆ ನಿನ್ನನ್ನು ತಡೆದು
ಆಕೆಯನ್ನು ಮುಟ್ಟಗೊಡಿಸಲಿಲ್ಲ. 7ಹೀಗಿರುವಲ್ಲಿ ಆ ಮನುಷ್ಯನ ಹೆಂಡತಿಯನ್ನು ತಿರಿಗಿ ಅವನಿಗೆ
ಒಪ್ಪಿಸಿ ಬಿಡು. ಅವನು ಪ್ರವಾದಿ, ನಿನಗೋಸ್ಕರ ನನಗೆ ಪ್ರಾರ್ಥಿಸುವನು, ಮತ್ತು ನೀನು
ಬದುಕುವಿ. ಆಕೆಯನ್ನು ಒಪ್ಪಿಸುವದಿಲ್ಲವೆಂದರೆ ನೀನೂ ನಿನ್ನವರೆಲ್ಲರೂ ಸತ್ತೇ ಸಾಯುವಿರೆಂದು
ತಿಳಿದುಕೋ ಎಂದು ಕನಸಿನಲ್ಲಿ ಹೇಳಿದನು.**

**ವಚನ 1.** ಅಧ್ಯಾಯವು ಅಬ್ರಹಾಮನ ಮುಂದಿನ ಪ್ರಯಾಣದ ಮೊದಲನೆಯ ಸ್ಥಳದಿಂದ ಆರಂಭಗೊಳ್ಳುತ್ತದೆ. **ಅಲ್ಲಿಂದ** ಎಂಬ ಪದಗುಚ್ಛವನ್ನು ಆತನು ಯಾವ ಸ್ಥಳದಿಂದ ಲೋಟನು ಒಂದು ಸಮಯದಲ್ಲಿ ವಾಸವಾಗಿದ್ದಂಥ ಸುಟ್ಟು ಹೋಗಿರುವ, ಹೊಗೆಯಿಂದ ತುಂಬಿರುವ ಕಣಿವೆಯನ್ನು ನೋಡಿದನೋ ಆ ಸ್ಥಳ ಎಂಬುದಾಗಿ ವ್ಯಾಖ್ಯಾನಿಸಬಹುದಾಗಿದೆ (19:27, 28).

ಹೇಗೂ, ಅಬ್ರಹಾಮನ ಪ್ರಯಾಣದಲ್ಲಿ ಅವನ ಪರಿವಾರದವರೆಲ್ಲರೂ ಪಾಲ್ಗೊಂಡಿರಬಹುದಾಗಿದ್ದರಿಂದ, "ಅಲ್ಲಿಂದ" ಎಂಬ ಪದಗುಚ್ಛವು ಆತನು "ಮಮ್ರೆತೋಪಿನಲ್ಲಿ ತನ್ನ ಗುಡಾರ" ಹಾಕಿದ್ದ ಸ್ಥಳವನ್ನು ಸೂಚಿಸುವ ಸಾಧ್ಯತೆಯು ಅಧಿಕವಾಗಿರುತ್ತದೆ (18:1).

ಮೂಲಪಿತೃವು ಏಕೆ ದಕ್ಷಿಣ ಕಾನಾನಿನ ನೆಗೆವ್ **ಸೀಮೆಗೆ** ಹೋದನೆಂಬುದನ್ನು ವಾಕ್ಯವು ವಿವರಿಸುವದಿಲ್ಲ. ಹೇಗೂ, ಅವನು **ಕಾದೇಶಿಗೂ ಶೂರಿಗೂ ನಡುವೆ ವಾಸಮಾಡಿಕೊಂಡು** ನೆಲೆಸಿದನು ಎಂಬುದನ್ನಂತೂ ಅದು ತಿಳಿಸುತ್ತದೆ, ಈ ಎರಡನೆಯ ಸ್ಥಳವು ಐಗುಪ್ತದ ಕಡೆಗೆ ಪಶ್ಚಿಮದಲ್ಲಿತ್ತು. ಇದು ಈ ಮುಂಚೆ ಹಾಗರಳು ಪಲಾಯನ ಮಾಡಿದ್ದ ಅದೇ ಸಾಮಾನ್ಯ ಸ್ಥಳವಾಗಿರುತ್ತದೆ (16:7, 14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅಬ್ರಹಾಮನು ಅಲ್ಲಿ ಎಷ್ಟು ಕಾಲ ಉಳಿದುಕೊಂಡನು ಎಂಬುದು ಖಚಿತವಾಗಿರುವದಿಲ್ಲ, ಆದರೆ ಬಳಿಕ ಆತನು ತನ್ನ ಪರಿವಾರವನ್ನೆಲ್ಲಾ ಉತ್ತರದ ಕಡೆಗೆ ಸ್ಥಳಾಂತರಿಸಿದನು ಮತ್ತು **ಕೆಲವು ಕಾಲ** [גּוּר, *ಗುರ್*] **ಗೆರಾರಿನಲ್ಲಿ** ಪ್ರವಾಸಿಯಾಗಿ **ಇದ್ದನು**. ಗೆರಾರಿನಲ್ಲಿ ಯಾವ ಸ್ಥಳವೆಂಬುದು ಖಚಿತವಾಗಿ ಹೇಳಲ್ಪಟ್ಟಿರುವದಿಲ್ಲ; ಆದರೆ ಆ ಸ್ಥಳವು ಬಹಳ ಸಂಭಾವ್ಯವಾಗಿ ಟೆಲ್ ಹಾರೊರ ಆಗಿರಬಹುದಾಗಿದೆ, ಅದು ಗಾಜಾದಿಂದ ಸುಮಾರು ಒಂಭತ್ತು ಮೈಲಿಗಳಷ್ಟು ಮತ್ತು ಬೇರ್ಷೆಬದಿಂದ[1] ವಾಯುವ್ಯಕ್ಕೆ ಹದಿನೈದು ಮೈಲಿಗಳಷ್ಟು ದೂರದಲ್ಲಿತ್ತು.

**ವಚನ 2. ಗೆರಾರಿನ ಅರಸನನ್ನು ಅಬೀಮೆಲೆಕ** ಎಂದು ಕರೆಯಲಾಗಿದ್ದು, ಆ ಹೆಸರಿನ ಅಕ್ಷರಶಃ ಅರ್ಥವು "ನನ್ನ ತಂದೆಯು ಅರಸನು." ಒಂದು ವೈಯಕ್ತಿಕ ಹೆಸರಿನ ಬದಲಾಗಿ, "ಅಬೀಮೆಲೆಕ" ಎಂಬುದು, ಐಗುಪ್ತದಲ್ಲಿನ "ಫರೋಹ" ಅಥವಾ ಅನಂತರದಲ್ಲಿ ರೋಮನ್ನರಲ್ಲಿದ್ದ "ಕೈಸರ"[2] ಎಂಬಂತೆ ಇರುವ ಒಂದು ರಾಜವಂಶದ ಬಿರುದು ಆಗಿತ್ತದೆಂದು ತೋರುತ್ತದೆ. ಆದಿಕಾಂಡ 26:1ನೇ ವಚನವು ಅನಂತರದಲ್ಲಿದ್ದ ಗೆರಾರಿನ ಅರಸನ ಕುರಿತು ಹೇಳುತ್ತದೆ, ಆತನ ಹೆಸರು ಸಹ "ಅಬೀಮೆಲೆಕ" ಎಂದಾಗಿತ್ತು.

ಇಲ್ಲಿ, ಎರಡನೆಯ ಸಾರಿ, **ಅಬ್ರಹಾಮನು** ಸುಳ್ಳಾಡುವವನಾಗಿ **ತನ್ನ ಹೆಂಡತಿಯಾದ ಸಾರಳನ್ನು ತಂಗಿಯೆಂದು** ಹೇಳಿದನು (ನೋಡಿರಿ 12:19). ಈ ಮುಂಚಿನ ಘಟನೆಗೆ ತದ್ವಿರುದ್ಧವಾಗಿ (ನೋಡಿರಿ 12:11), ಮೂಲಪಿತೃವು ಈ ಸಂದರ್ಭದಲ್ಲಿ ಅವಳ ಸೌಂದರ್ಯವನ್ನು ಪ್ರಶಂಸೆ ಮಾಡಲಿಲ್ಲ. ಸುಮಾರು ಇಪ್ಪತ್ತೈದು ವರ್ಷಗಳು ಗತಿಸಿದ್ದವು, ಮತ್ತು ಸಾರಳು ಹೆಚ್ಚುಕಡಿಮೆ ಈಗ ತೊಂಭತ್ತು ವರ್ಷದವಳಾಗಿದ್ದಳು. ಈ ವಿವರಗಳನ್ನು ಹೇಗೆ ಅರ್ಥಮಾಡಿಕೊಳ್ಳತಕ್ಕದ್ದು?

ಆಗ ಆಯುಷ್ಕಾಲವು ಬಹಳ ದೀರ್ಘವಾಗಿರುತ್ತಿದ್ದದರಿಂದ, ಸಾರಳು ಮಧ್ಯವಯಸ್ಕಳಾಗಿ ಕಂಡಿರುವ ಸಾಧ್ಯತೆಯಿದೆ ಮತ್ತು ಆಕೆಯು ಈಗಲೂ ಆಕರ್ಷಕವಾಗಿದ್ದಿರಬಹುದು. ಆಕೆಯು ಈಗಲೂ ಸೌಂದರ್ಯವತಿಯಾಗಿರುವದನ್ನು 20:11ರಲ್ಲಿ ಅಬ್ರಹಾಮನ ಹೇಳಿಕೆಯಿಂದ ಊಹಿಸಿಕೊಳ್ಳಬಹುದಾಗಿದೆ: "ಈ ಸ್ಥಳದವರು ದೇವರ ಭಯವಿಲ್ಲದವರಾಗಿ ನನ್ನ ಹೆಂಡತಿಯ ನಿಮಿತ್ತ ನನ್ನನ್ನು ಕೊಂದಾರೆಂದು ನೆನಸಿದೆನು" (12:11, 12). ವಾಚಕನು ಐಗುಪ್ತದಲ್ಲಿ ಈ ಹಿಂದೆ ನಡೆದ ಕಥೆಯಲ್ಲಿನ ಸಾಮ್ಯತೆಗಳೊಂದಿಗೆ ಸಂಬಂಧಗೊಳಿಸಿಕೊಳ್ಳುವನು ಎಂಬುದನ್ನು ಗ್ರಹಿಸಿಕೊಂಡು, ಲೇಖಕನು ಇಲ್ಲಿ ಗೆರಾರಿನ ಕಥೆಯೊಳಗೆ ಎಲ್ಲಾ ವಿವರಗಳನ್ನು ಸೇರ್ಪಡೆಗೊಳಿಸುವ ಅವಶ್ಯಕತೆಯನ್ನು ಕಾಣಲಿಲ್ಲ ಎಂದಾಗಿರಬಹುದು.

ಇನ್ನೊಂದು ಅರ್ಥನಿರೂಪಣೆಯು ಏನೆಂದರೆ ಅಬೀಮೆಲೆಕನು **ಸಾರಳನ್ನು ತನ್ನ ಮನೆಯಲ್ಲಿ ಸೇರಿಸಿಕೊಂಡದ್ದು** ಆಕೆಯ ಸೌಂದರ್ಯಕ್ಕಿಂತಲೂ ಆರ್ಥಿಕ ಅಥವಾ ಮಿಲಿಟರಿ ಕಾರಣಗಳಿಗೋಸ್ಕರವಾಗಿತ್ತು ಎಂಬುದೆ. 13:2ರ ಪ್ರಕಾರವಾಗಿ, ಅಬ್ರಹಾಮನು ಬಹಳ

ಐಶ್ವರ್ಯವಂತನಾಗಿದ್ದನು. ಅಲ್ಲದೆ, ಆತನ ಬಳಿಯಲ್ಲಿ ಕನಿಷ್ಠ 318 ವ್ಯಕ್ತಿಗಳುಳ್ಳ ಖಾಸಗಿ ಸೈನ್ಯವು ಇತ್ತು (14:14). ಈ ಹೊತ್ತಿಗಾಗಲೇ, ಆತನ ಬಳಿಯಲ್ಲಿ ಇನ್ನು ಅನೇಕ ಮಂದೆಗಳು, ಹಿಂಡುಗಳು, ಮತ್ತು ಯುದ್ಧ ಮಾಡಬಲ್ಲಂಥ ದನಕಾಯುವವರು ಇದ್ದಿರಬಹುದಾಗಿದೆ. ಈತನು ಒಬ್ಬ ಶಕ್ತಿಶಾಲಿ ಶೇಕ್ ಆಗಿದ್ದನು, ಮತ್ತು ಗೆರಾರಿನ ಅರಸನು ಮೂಲಪಿತೃವನ್ನು ಮಿತ್ರನನ್ನಾಗಿ ಇಟ್ಟುಕೊಳ್ಳಲು ಬಯಸಿರಬಹುದಾಗಿದೆ. ಇದಕ್ಕೆ ಸ್ವಲ್ಪ ಮಟ್ಟಿಗೆ ಮಹತ್ವವಿರುತ್ತದಾದರೂ, 20:11ರಲ್ಲಿ ಅಬ್ರಹಾಮನು ಭಯ ಪಡುವದನ್ನು ನೋಡುವಾಗ ಇದು ಲೆಕ್ಕಕ್ಕೆ ಬರುವದಿಲ್ಲ ಎಂದು ಕಾಣಿಸುತ್ತದೆ: "ನನ್ನ ಹೆಂಡತಿಯ ನಿಮಿತ್ತ ನನ್ನನ್ನು ಕೊಂದಾರೆಂದು ನೆನಸಿದೆನು."

**ವಚನ 3. ಆದರೆ ರಾತ್ರಿಯಲ್ಲಿ ದೇವರು ಅಬೀಮೆಲೆಕನ ಕನಸಿನಲ್ಲಿ ಬಂದನು.** ಇದು ಮತ್ತೊಂದು ಆಶ್ಚರ್ಯಕರ ವಾಕ್ಯಭಾಗವಾಗಿದೆ ಯಾಕೆಂದರೆ, ಮೆಲ್ಕೀಚೆದೆಕ (14:18–20), ಬಿಳಾಮ (ಅರಣ್ಯಕಾಂಡ 22–24), ಮತ್ತು ಫರೋಹ ನೆಕೋ (2 ಪೂರ್ವಕಾಲವೃತ್ತಾಂತ 35:22)[3] ಇವರ ವಿಷಯದಲ್ಲಿ ನಡೆದ ಪ್ರಕಾರವೇ, ಹಳೆಯ ಒಡಂಬಡಿಕೆಯೊಳಗೆ ದೇವರ ಪ್ರಕಟನೆಯ ಮೇಲೆ ಅಬ್ರಹಾಮ ಮತ್ತು ಆತನ ಸಂತತಿಯವರು ಏಕ ಸ್ವಾಮ್ಯತೆಯನ್ನು ಹೊಂದಿರುವದಿಲ್ಲ. ದೇವರು ಅರಸನಿಗೆ ತನ್ನನ್ನು ಪ್ರಕಟಿಸಿಕೊಳ್ಳುವದಕ್ಕೆ ಮುನ್ನ ಎಷ್ಟು ಕಾಲವು ಗತಿಸಿತ್ತೆಂಬುದನ್ನು ಕಥನವು ತಿಳಿಸುವದಿಲ್ಲ. ಹೇಗಿದ್ದರೂ, 20:17, 18ರಲ್ಲಿ ಯೆಹೋವನು ಅಬೀಮೆಲೆಕನ ಮನೆಯವರಲ್ಲಿನ ಮಹಿಳೆಯರನ್ನೆಲ್ಲಾ ಬಂಜೆಯನ್ನಾಗಿ ಮಾಡಿದ್ದರಿಂದ ಯಾರೂ ಗರ್ಭವನ್ನು ಧರಿಸಲಿಲ್ಲ ಎಂಬುದು ಮಾತ್ರ ತಿಳಿಸಲ್ಪಟ್ಟಿದೆ. ಈ ವಿವರವು ಸೂಚಿಸುವದೇನೆಂದರೆ ಅಬೀಮೆಲೆಕನು ಸಾರಳನ್ನು ತೆಗೆದುಕೊಂಡದ್ದಕ್ಕೂ ದೇವರು ಒಂದು ಕನಸಿನಲ್ಲಿ ಆತನಿಗೆ ಕಾಣಿಸಿಕೊಂಡದ್ದಕ್ಕೂ ನಡುವಿನ ಮಧ್ಯಂತರವು ಕನಿಷ್ಠ ಹಲವಾರು ತಿಂಗಳುಗಳನ್ನು ಒಳಗೊಂಡಿರಬಹುದು ಎಂಬುದೆ. ತಾವು ಗರ್ಭಿಣಿಯರಾಗಲು ಸಾಧ್ಯವಾಗಲಿಲ್ಲ ಎಂಬುದನ್ನು ಎಲ್ಲಾ ಮಹಿಳೆಯರು ಗ್ರಹಿಸಿಕೊಳ್ಳಲು ಸ್ವಲ್ಪ ಕಾಲವು ಹಿಡಿದಿರಬಹುದು.

ದೇವರು ಅರಸನಿಗೆ ಒಂದು ಭಯಾನಕವಾದ ಹೇಳಿಕೆಯೊಂದಿಗೆ ನೇರವಾಗಿ ಎಚ್ಚರಿಸಿದನು: **ನೀನು ಆ ಸ್ತ್ರೀಯನ್ನು ಸೇರಿಸಿಕೊಂಡದರಿಂದ ಸಾಯತಕ್ಕವನಾಗಿದ್ದಿ; ಆಕೆ ಮುತ್ತೈದೆ.** ಪ್ರಾಚೀನ ಜಗತ್ತಿನುದ್ದಕ್ಕೂ, ವ್ಯಭಿಚಾರಕ್ಕಾಗಿ ದೊರಕುವ ದಂಡನೆಯು ಮರಣವಾಗಿತ್ತು, ಮತ್ತು ಅಂಥ ದಂಡನೆಯನ್ನು ಅನಂತರದಲ್ಲಿ ಮೋಶೆಯ ಧರ್ಮಶಾಸ್ತ್ರದಲ್ಲಿ ಸೇರ್ಪಡೆಗೊಳಿಸಲಾಯಿತು (ಯಾಜಕಕಾಂಡ 20:10; ಧರ್ಮೋಪದೇಶಕಾಂಡ 22:22). ಅದರ ಜೊತೆಗೆ, ಈ ಘಟನೆಯು ಅದಿಕಾಂಡ 12:17ರಲ್ಲಿ ಫರೋಹನು ಸಾರಳನ್ನು ತನ್ನ ಉಪಪತ್ನಿಯರೊಳಗೆ ಸೇರಿಸಿಕೊಂಡ ವೇಳೆ ಆತನ ಮನೆಯವರ ಮೇಲೆ ಬಂದಂಥ ಉಪದ್ರವಗಳನ್ನು ನಮಗೆ ಜ್ಞಾಪಿಸುತ್ತದೆ. ಫರೋಹ ಮತ್ತು ಅಬೀಮೆಲೆಕ ಇವರಿಬ್ಬರೂ ದೈವಿಕ ಶಾಪಗಳನ್ನು ಅನುಭವಿಸಿದರು (ನೋಡಿರಿ 12:3). ಇವರಿಬ್ಬರಲ್ಲಿ ಪ್ರತಿಯೊಬ್ಬ ಮನುಷ್ಯನು ಅಬ್ರಹಾಮನ ಹೆಂಡತಿಯನ್ನು ಕಸಿದುಕೊಂಡವರಾಗಿ ಆತನ ಸಂಗಡ ತಪ್ಪಾದ ಸಂಬಂಧವನ್ನು ಹೊಂದಿದವರಾಗಿದ್ದರು.

**ವಚನ 4. ಅಬೀಮೆಲೆಕನು** ತಾನು **ಆಕೆಯನ್ನು ಕೂಡಲಿಲ್ಲ** ಎಂದು ಹೇಳುವ ಮೂಲಕ ತನ್ನದು ತಪ್ಪಿಲ್ಲವೆಂದು ಹೇಳಿಕೊಂಡನು. ಇಬ್ರಿಯ ಪದ קָרַב (*ಕರಾಬ*) ಎಂಬುದರ ಅರ್ಥವು "ಸಮೀಪಿಸಲಿಲ್ಲ" ಅಥವಾ "ಹತ್ತಿರ ಹೋಗಲಿಲ್ಲ" ಎಂದಾಗಿರುತ್ತದೆ; ಹೇಗೂ, ಈ ವಿಧವಾದ ಸನ್ನಿವೇಶಗಳಲ್ಲಿ ಅದರ ಅರ್ಥವು ಒಂದು ಲೈಂಗಿಕ ಸಂಭೋಗವನ್ನು ಇಟ್ಟುಕೊಳ್ಳುವುದನ್ನು ಸೂಚಿಸುತ್ತದೆ (ಯಾಜಕಕಾಂಡ 18:6, 14, 19; ಧರ್ಮೋಪದೇಶಕಾಂಡ 22:14; ಯೆಶಾಯ 8:3), ತಾನು ಹೀಗೆ ಸಾರಳಿಗೆ ಮಾಡಿಲ್ಲ ಎಂಬುದಾಗಿ ಅರಸನು ಖಡಾಖಂಡಿತವಾಗಿ

ಹೇಳುತ್ತಾನೆ.

ಬಳಿಕ ಅರಸನು **ಸ್ವಾಮೀ**[4]ಯನ್ನು ತಾನು **ನಿರಪರಾಧಿಯಾ** [ಗಿದ್ದರೂ] **ಜನವನ್ನೂ ನಾಶಮಾಡುವಿಯಾ?** ಎಂದು ಕೇಳಿದನು. ಅಬೀಮೆಲೆಕನು ತನ್ನ ಬದಲಾಗಿ "ಜನಾಂಗ"ವನ್ನು ಉಲ್ಲೇಖಿಸಿದನೆಂದು ತೋರುತ್ತದೆ ಯಾಕೆಂದರೆ ಅರಸನಿಗೆ ಬರಮಾಡುವ ಯಾವದೇ ದೈವಿಕ ದಂಡನೆಯು ಇಡೀ ಜನಾಂಗದ ಮೇಲೆ ಸಹ ಬೀಳುವದೆಂದು ಪ್ರಾಚೀನ ಜನರು ಭಾವಿಸಿಕೊಂಡಿದ್ದರು. ದೇವರ ಶಾಪವು ಈಗಾಗಲೇ ಅರಸನ ಹೆಂಡತಿಯ ಮೇಲೆ ಮತ್ತು ಅವನ ಮನೆಯಲ್ಲಿನ ಇತರ ಮಹಿಳೆಯರ ಮೇಲೆ ಬಂದಿತ್ತಾದ್ದರಿಂದ (20:17, 18), ಯೆಹೋವನು ಎಲ್ಲಾ ಜನರನ್ನೂ ನಾಶಮಾಡುವನೆಂದು ಅಬೀಮೆಲೆಕನು ಹೆದರಿದ್ದನು. ಈ ವಿಷಯದಲ್ಲಿ ತಾನು ಮತ್ತು ತನ್ನ ಜನಾಂಗವು ನಿರಪರಾಧಿ ಮತ್ತು ನಾಶನಕ್ಕೆ ಯೋಗ್ಯರಲ್ಲ ಎಂಬುದು ಆತನ ಮನವಿಯಾಗಿತ್ತು, ಯಾಕೆಂದರೆ ಸಾರಳು ಮದುವೆಯಾಗಿರುವವಳು ಎಂಬುದು ಅವರಲ್ಲಿ ಯಾರಿಗೂ ಗೊತ್ತಿರಲಿಲ್ಲ.

**ವಚನ 5.** ಅರಸನು ಅಬ್ರಹಾಮನ ಮಾತುಗಳನ್ನು ನೆನಪಿಸುವವನಾಗಿ ತನ್ನ ಪ್ರಕರಣವನ್ನು ಸಮರ್ಥಿಸಿಕೊಂಡನು, **ಈಕೆ ತನಗೆ ತಂಗಿಯಾಗಬೇಕು** (20:2), ಮಾತ್ರವಲ್ಲದೆ ಸಾರಳು ಹೇಳಿಕೊಂಡ **ಅವನು ತನಗೆ ಅಣ್ಣನಾಗಬೇಕೆಂಬ** ಮಾತನ್ನು ಸಹ ಜ್ಞಾಪಿಸುತ್ತಾನೆ (ನೋಡಿರಿ 12:13). ಈ ಇಡೀ ವಿಷಯದಲ್ಲಿ ದೇವರು **ಇವನು ಯಥಾರ್ಥಮನಸ್ಸಿನಿಂದಲೂ ಶುದ್ಧಹಸ್ತದಿಂದಲೂ ಇದನ್ನು ಮಾಡಿದೆನು** ಎಂಬುದನ್ನು ಗುರುತಿಸಬೇಕೆಂದು ವಾದಿಸಿದನು. "ಯಥಾರ್ಥಮನಸ್ಸು" (תֹּם, *ಥೋಮ*) ಎಂಬ ಪದದ ಬಳಕೆಯ ಅರ್ಥವು ಏನೆಂದರೆ ಅರಸನು ಒಂದು "ಪರಿಪೂರ್ಣ" ಅಥವಾ "ದೋಷವಿಲ್ಲದ" ಹೃದಯವನ್ನು ಹೊಂದಿದ್ದನು (ನೋಡಿರಿ 6:9) ಮತ್ತು ಆತನ ಕ್ರಿಯೆಗಳು ಯಾವದೇ ಅಯೋಗ್ಯವಾದ ಉದ್ದೇಶವನ್ನು ಹೊಂದಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. "ಶುದ್ಧಹಸ್ತ" ಎಂಬುದು "ಪಾಪರಹಿತ ನಡವಳಿಕೆ" ಎಂಬದನ್ನು ವ್ಯಕ್ತಪಡಿಸುವ ದೋಷವಿಲ್ಲದ ಕೈಗಳು (ಕೀರ್ತನೆ 24:4; 26:6; 73:13) ಎಂದು ಸೂಚಿಸುತ್ತದೆ. ಸಾರಳಿಗೆ ಸಂಬಂಧಿಸಿದಂತೆ, ಆಲೋಚನೆ ಮತ್ತು ಕ್ರಿಯೆಗಳೆರಡರಲ್ಲಿಯೂ ತನಗೆ ಯಾವ ಕೆಟ್ಟ ಉದ್ದೇಶವೂ ಇರಲಿಲ್ಲ ಮತ್ತು ತಾನು ನಿರ್ದೋಷಿ ಎಂಬುದಾಗಿ ಅಬೀಮೆಲೆಕನು ಹೇಳಿಕೊಳ್ಳುತ್ತಿದ್ದಾನೆ.

**ವಚನ 6.** ಅರಸನು ಸಾರಳನ್ನು ತನ್ನ ಉಪಪತ್ನಿಯರಲ್ಲಿ ಸೇರಿಸಿಕೊಂಡಾಗ **ಇದನ್ನು ಯಥಾರ್ಥಮನಸ್ಸಿನಿಂದ** (ಪೂರ್ಣಹೃದಯದಿಂದ) **ಮಾಡಿ**ದನು ಎಂಬುದನ್ನು ಬಲ್ಲೆನು ಎಂದು **ದೇವರು** ಅವನಿಗೆ ತಿಳಿಸಲು ಕನಸಿನಲ್ಲಿ ಕಾಣಿಸಿಕೊಂಡನು. ಯೆಹೋವನಿಗೆ ಇದು ತಿಳಿದಿದ್ದು ಮಾತ್ರವೇ ಆಗಿರಲಿಲ್ಲ, ಆದರೆ ಆತನು ಹೀಗೆ ಸಹ ಹೇಳಿದನು, **ನೀನು ನನಗೆ ವಿರುದ್ಧವಾಗಿ ಪಾಪಮಾಡದಂತೆ ನಿನ್ನನ್ನು ತಡೆ**ದೆನು. ಈ ಕಡೆಯ ಹೇಳಿಕೆಯು ವ್ಯಭಿಚಾರದ ಗಂಭೀರತೆಯನ್ನು ಕುರಿತು ಒತ್ತಿ ಹೇಳುತ್ತದೆ. ಅಂಥ ಒಂದು ಅಪರಾಧವು ಸಾರಳು ಮತ್ತು ಅಬ್ರಹಾಮನ ವಿರುದ್ಧವಾಗಿ ಮಾಡಿದ ಕೃತ್ಯ ಮಾತ್ರವೇ ಆಗಿರುತ್ತಿರಲಿಲ್ಲ; ಬದಲಾಗಿ ಅದು ಮೂಲಭೂತವಾಗಿ ದೇವರಿಗೆ ವಿರುದ್ಧವಾದ ಕೃತ್ಯವಾಗಿರುತ್ತಿತ್ತು, ಆತನೇ ಮದುವೆಯ ಸಂಬಂಧದ ತಳಹದಿ ಮತ್ತು ಅಸ್ತಿವಾರ ಆಗಿರುತ್ತಾನಷ್ಟೆ (2:18–25). ಸಾರಳ ಕಡೆಗೆ ಅಬೀಮೆಲೆಕನನಿಗೆ ಲೈಂಗಿಕ ಬಯಕೆಗಳು ಉಂಟಾಗದಂತೆ ದೇವರು ತಡೆದು ಆ ಮೂಲಕವಾಗಿ **ಆಕೆಯನ್ನು** ಲೈಂಗಿಕವಾಗಿ **ಮುಟ್ಟಗೊಡಲಿಲ್ಲ** ಮತ್ತು ಮರಣಕ್ಕೆ ಯೋಗ್ಯವಾದ ಕೃತ್ಯವನ್ನು ಮಾಡಗೊಡಲಿಲ್ಲ.

**ವಚನ 7.** ಮತ್ತೊಬ್ಬನ ಹೆಂಡತಿಯಾದ ಸಾರಳಿಗೆ ಸಂಬಂಧ ಪಟ್ಟಂತೆ ಅಬೀಮೆಲೆಕ

ಮತ್ತು ಆತನ ಜನರು ಎದುರಿಸುತ್ತಿರುವ ನಿಜವಾದ ಬಿಕ್ಕಟ್ಟಿನ ಸ್ವಭಾವವು ಏನೆಂಬುದನ್ನು ದೇವರು ಅವನಿಗೆ ತಿಳಿಸಿದ್ದನಾದ್ದರಿಂದ, ಅರಸನು ಆ ಮಾಹಿತಿಗನುಗುಣವಾಗಿ ಕ್ರಮ ಕೈಗೊಳ್ಳಬೇಕೆಂದು ಆತನು ಎದುರು ನೋಡಿದನು. ಒಬ್ಬ ವೈಶಿಷ್ಟ್ಯನಾದ ಅನ್ಯಧರ್ಮಿಯ ಅರಸನು ಪರಿಸ್ಥಿತಿಗೆ ಅನೇಕ ಕಾರಣಗಳನ್ನು ನೀಡಿರಬಹುದಿತ್ತು, ಅಬ್ರಹಾಮನು ತನಗೆ ಸುಳ್ಳು ಹೇಳಿದ್ದನಾದ್ದರಿಂದ ಸಾರಳನ್ನು ತನ್ನಲ್ಲಿ ಇಟ್ಟುಕೊಳ್ಳಲು ತನಗೆ ಹಕ್ಕು ಇರುತ್ತದೆಂಬ ನಿರ್ಣಯಕ್ಕೆ ಬಂದಿರಬಹುದಿತ್ತು. ಹೀಗೆ ನಡೆಯುವದರನ್ನು ತಡೆಯುವದಕ್ಕೋಸ್ಕರ, ದೇವರು ಅಬೀಮೆಲೆಕನಿಗೆ ಸಾರಳನ್ನು ಪುನಃ ಅಬ್ರಹಾಮನಿಗೆ ಒಪ್ಪಿಸಬೇಕು ಎಂದು ಹೇಳಿದ್ದನು, ಅಲ್ಲದೆ **ಅವನು ಪ್ರವಾದಿ, ನಿನಗೋಸ್ಕರ ನನಗೆ ಪ್ರಾರ್ಥಿಸುವನು, ಮತ್ತು ನೀನು ಬದುಕುವಿ** ಎಂದು ತಿಳಿಸಿದ್ದನು.

ಶಾಸ್ತ್ರಗಳಲ್ಲಿ "ಪ್ರವಾದಿ" ಎಂಬ ಪದವು ಬಳಸಲ್ಪಟ್ಟಿರುವುದು ಇದೇ ಮೊದಲ ಸಾರಿ ಆಗಿರುತ್ತದೆ. ಇಲ್ಲಿ, ಈ ಪದವು ಬೇರೆಯರಿಗೋಸ್ಕರ ವಿಜ್ಞಾಪನೆ ಮಾಡುವ ವ್ಯಕ್ತಿಯನ್ನು ಸೂಚಿಸುತ್ತದೆ. ಅನಂತರದಲ್ಲಿ ಪ್ರವಾದಿಗಳು - ಮೋಶೆ, ಸಮುವೇಲ, ಯೆರೆಮೀಯ, ಆಮೋಸ, ಮತ್ತು ಇತರರು - ಇಸ್ರಾಯೇಲ್ಯರಿಗೋಸ್ಕರ ಪ್ರಾರ್ಥಿಸಿದರು. ಹೇಗೂ, ಯೆಹೋವನು ಪ್ರವಾದಿಗಳನ್ನು ಮುಖ್ಯವಾಗಿ ಜನರಿಗೆ ಅವಶ್ಯಕವಾದ ಸಂದೇಶಗಳನ್ನು ಸಾರುವದಕ್ಕೆ, ಅವರಿಗೆ ನೀತಿಯುಳ್ಳ ಜೀವಿತ ನಡಿಸುವದಕ್ಕೆ ಮಾರ್ಗದರ್ಶನ ಕೊಡುವದಕ್ಕೆ, ಅವರು ವಿಫಲರಾದಾಗ ಅವರ ಪಾಪಗಳನ್ನು ಮನವರಿಕೆ ಮಾಡುವದಕ್ಕೆ, ಅವರು ಅವಿಧೇಯತೆಯಲ್ಲಿ ಮುಂದುವರೆದರೆ ತಪ್ಪದೆ ಬರಲಿರುವ ನಾಶನದ ಕುರಿತು ಎಚ್ಚರಿಸುವದಕ್ಕೆ, ಮತ್ತು ಪಶ್ಚಾತ್ತಾಪ ಪಟ್ಟು ಆತನ ಕಡೆಗೆ ತಿರುಗಿಕೊಳ್ಳುವದಾದರೆ ದೊರಕುವ ಭವಿಷ್ಯದ ನಿರೀಕ್ಷೆಯ ಕುರಿತು ತಿಳಿಸುವದಕ್ಕೆ ಕರೆದನು. ಅಬ್ರಹಾಮನು ಸೊದೋಮಿನ ಪರವಾಗಿ ವಿಜ್ಞಾಪನೆ ಮಾಡುವವನಾಗಿ ಕಾರ್ಯ ನಿರ್ವಹಿಸಿದ್ದನು (ನೋಡಿರಿ 18:23-33), ಮತ್ತು ಈಗ ಆತನು ಅದೇ ವಿಧವಾದ ಪ್ರವಾದನಾತ್ಮಕ ಕೆಲಸವನ್ನು ನಡಿಸುವನು ಮತ್ತು ಆತನ ಜನರು ಬದುಕುವವರಾಗಿ ಮುನ್ನಡೆಯುವರು ಎಂಬುದಾಗಿ ದೇವರು ಅಬೀಮೆಲೆಕನಿಗೆ ವಾಗ್ದಾನ ಮಾಡಿದನು. ಒತ್ತಿ ಹೇಳುವದಕ್ಕೋಸ್ಕರವಾಗಿ, ಆತನು ಈ ಮಾತನ್ನು ಸಹ ಸೇರಿಸಿದನು, ನೀನು ಅಬ್ರಹಾಮನಿಗೆ **ಆಕೆಯನ್ನು ಒಪ್ಪಿಸುವದಿಲ್ಲವೆಂದರೆ ನೀನೂ ನಿನ್ನವರೆಲ್ಲರೂ ಸತ್ತೇ ಸಾಯುವಿರೆಂದು ತಿಳಿದುಕೋ.**

## ಅಬ್ರಹಾಮನ ಸಂಗಡ ಅಬೀಮೆಲೆಕನು ಇತ್ಯರ್ಥ ಮಾಡಿಕೊಂಡಿದ್ದು (20:8-18)

**[8]ಬೆಳಿಗ್ಗೆ ಅಬೀಮೆಲೆಕನು ತನ್ನ ಸೇವಕರೆಲ್ಲರನ್ನು ಕೂಡಿಸಿ ಈ ಸಂಗತಿಗಳನ್ನೆಲ್ಲಾ ತಿಳಿಸಲು ಅವರು ಬಹು ಭಯಪಟ್ಟರು. [9]ಆಮೇಲೆ ಅವನು ಅಬ್ರಹಾಮನನ್ನು ಕರಿಸಿ - ನೀನು ನಮಗೆ ಮಾಡಿದ್ದೇನು? ನಾನು ಯಾವ ತಪ್ಪು ಮಾಡಿದ್ದರಿಂದ ನೀನು ನನ್ನನ್ನೂ ನನ್ನ ರಾಜ್ಯವನ್ನೂ ಮಹಾಪಾತಕಕ್ಕೆ ಒಳಪಡಿಸಿದಿ? ಮಾಡಬಾರದ ಕಾರ್ಯಗಳನ್ನು ನನಗೆ ಮಾಡಿದೆ ಎಂದು ಹೇಳಿ - [10]ನೀನು ಯಾವ ಉದ್ದೇಶದಿಂದ ಈ ಕಾರ್ಯವನ್ನು ಮಾಡಿದೆ ಎಂದು ಅಬ್ರಹಾಮನನ್ನು ಕೇಳಿದನು. [11]ಅದಕ್ಕೆ ಅಬ್ರಹಾಮನು - ಈ ಸ್ಥಳದವರು ದೇವರ ಭಯವಿಲ್ಲದವರಾಗಿ ನನ್ನ ಹೆಂಡತಿಯ ನಿಮಿತ್ತ ನನ್ನನ್ನು ಕೊಂದಾರೆಂದು ನೆನಸಿದೆನು. [12]ಅದಲ್ಲದೆ ಆಕೆ ನಿಜವಾಗಿ ನನ್ನ ತಂಗಿ ನನ್ನ ತಂದೆಯ ಮಗಳೇ; ಆದರೆ ನನ್ನ ತಾಯಿಯ ಮಗಳಲ್ಲವಾದದರಿಂದ ನನಗೆ ಹೆಂಡತಿಯಾದಳು. [13]ನಾನು ದೇವಸಂಕಲ್ಪದಿಂದ ತಂದೆಯ ಮನೆಯನ್ನು ಬಿಟ್ಟು ದೇಶಾಂತರ**

**ಹೋಗುವದಕ್ಕೆ ಹೊರಟಾಗ ನಾನು ಆಕೆಗೆ - ನಾವು ಹೋಗುವ ಎಲ್ಲಾ ಸ್ಥಳಗಳಲ್ಲಿಯೂ ನನಗೆ ನಿನ್ನಿಂದ ಒಂದು ಉಪಕಾರವಾಗಬೇಕು, ಏನಂದರೆ ನೀನು ನನ್ನನ್ನು ಅಣ್ಣನೆಂಬದಾಗಿ ಹೇಳಬೇಕೆಂದು ಬೋಧಿಸಿದೆನು ಅಂದನು. [14]ಆಗ ಅಬೀಮೆಲೆಕನು ಅಬ್ರಹಾಮನಿಗೆ ಕುರಿದನಗಳನ್ನೂ ದಾಸದಾಸಿಯರನ್ನೂ ಕೊಟ್ಟು ಅವನ ಹೆಂಡತಿಯಾದ ಸಾರಳನ್ನು ಅವನಿಗೆ ಒಪ್ಪಿಸಿ - [15]ಇಗೋ ನನ್ನ ದೇಶವು; ಇದರೊಳಗೆ ನಿನಗೆ ಇಷ್ಟವಿದ್ದ ಕಡೆಯಲ್ಲಿ ವಾಸಮಾಡಬಹುದು ಅಂದನು. [16]ಇದಲ್ಲದೆ ಅವನು ಸಾರಳಿಗೆ - ನಿನ್ನ ಅಣ್ಣನಿಗೆ ಸಾವಿರ ರೂಪಾಯಿ ಕೊಟ್ಟಿದ್ದೇನೆ; ನಡೆದದ್ದನ್ನು ನಿನ್ನ ಕಡೆಯವರು ಲಕ್ಷ್ಯಕ್ಕೆ ತೆಗೆದುಕೊಳ್ಳದಂತೆ ಇದು ಪ್ರಾಯಶ್ಚಿತ್ತವಾಗಿರಲಿ; ನೀನು ಮಾನಸ್ಥಳೆಂದು ಇದರಿಂದ ಎಲ್ಲರೂ ತಿಳಿದುಕೊಳ್ಳುವರು ಎಂದು ಹೇಳಿದನು. [17]ತರುವಾಯ ಅಬ್ರಹಾಮನು ದೇವರನ್ನು ಬೇಡಿಕೊಳ್ಳಲು ದೇವರು ಅಬೀಮೆಲೆಕನನ್ನೂ ಅವನ ಪತ್ನಿಯನ್ನೂ ದಾಸಿಯರನ್ನೂ ವಾಸಿಮಾಡಿದ್ದರಿಂದ ಅವರಿಗೆ ಮಕ್ಕಳಾದರು. [18]ಮುಂಚೆ ಅಬ್ರಹಾಮನ ಹೆಂಡತಿಯಾದ ಸಾರಳ ನಿಮಿತ್ತ ಯೆಹೋವನು ಅಬೀಮೆಲೆಕನ ಮನೆಯಲ್ಲಿದ್ದ ಸ್ತ್ರೀಯರೆಲ್ಲರೂ ಬಂಜೆಯರಾಗುವಂತೆ ಮಾಡಿದ್ದನು.**

**ವಚನ 8.** ದೇವರಿಂದ ಭಯಾನಕವಾದ ಎಚ್ಚರಿಕೆಯನ್ನು ಪಡೆದುಕೊಂಡವನಾಗಿ, **ಅಬೀಮೆಲೆಕನು** ಇನ್ನು ಹೆಚ್ಚು ಸಮಯವನ್ನು ವ್ಯರ್ಥ ಮಾಡಲಿಲ್ಲ. ಆತನು **ಬೆಳಿಗ್ಗೆ** ಎದ್ದು **ತನ್ನ ಸೇವಕರೆಲ್ಲರನ್ನು ಕೂಡಿಸಿ** ಯೆಹೋವನು ಹೇಳಿದ ಬುದ್ಧಿವಾದದ ಕುರಿತಾದ **ಸಂಗತಿಗಳನ್ನೆಲ್ಲಾ ತಿಳಿಸಿದನು.** ಈ ವರದಿಯನ್ನು ಕೇಳಿಸಿಕೊಂಡು **ಅವರು ಬಹು ಭಯಪಟ್ಟರು**. ಅರಸನ ಸೇವಕರಿಗೆ ಎಷ್ಟೊಂದು ಕಳವಳವುಂಟಾಗಿತ್ತೆಂದರೆ ಅವರು ತಮ್ಮ ಒಡೆಯನ ಮುಂದೆ ಬರುವಂತೆ ಅಬ್ರಹಾಮನನ್ನು ಕರೆಯಿಸಿದರು.

**ವಚನ 9. ಅಬೀಮೆಲೆಕನು** ಮೂಲಪಿತೃವನ್ನು ವಿಚಾರಣೆ ಮಾಡಿದನು, **ನೀನು ನಮಗೆ ಮಾಡಿದ್ದೇನು?** ಎಂಬುದರ ಮೂಲಕ ಪ್ರಶ್ನೆಗಳ ಸರಣಿಯನ್ನು ಆರಂಭಗೊಳಿಸಿದ್ದನು. ಈ ಮೊದಲನೆಯ ಪ್ರಶ್ನೆಯು ಭಾವೋತ್ತೇಜಕದ ಸ್ವಭಾವದಿಂದ ಕೂಡಿತ್ತು, ಯಾಕೆಂದರೆ ಅರಸನ ಆಸ್ಥಾನದಲ್ಲಿದ್ದ ಎಲ್ಲರಿಗೂ ಅಬ್ರಹಾಮನ ಮೋಸವು ಏನೆಂಬುದು ಗೊತ್ತಿತ್ತು ಮತ್ತು ತಮ್ಮ ಮೇಲೆ ಮರಣದ ಗಂಡಾಂತರವು ತೂಗಾಡುತ್ತಿದೆ ಎಂಬುದು ತಿಳಿದಿತ್ತು. ಇದೇ ಪರಿಸ್ಥಿತಿಯಲ್ಲಿದ್ದಂಥ ಐಗುಪ್ತದ ಫರೋಹನು ಸಾರಳ ಅಣ್ಣನೆಂದು ಹೇಳಿಕೊಂಡವನಿಗೆ ಇದೇ ವಿಧವಾದ ಪ್ರಶ್ನೆಯನ್ನು ಕೇಳಿದ್ದನು (12:18).

ಅಬ್ರಹಾಮನಿಗೆ ಉತ್ತರಿಸುವದಕ್ಕೆ ಸಮಯವನ್ನೂ ಕೊಡದವನಾಗಿ, ಅರಸನು ಮುಂದುವರೆಸಿ ಹೀಗೆ ಕೇಳಿದನು, **ನಾನು ಯಾವ ತಪ್ಪು ಮಾಡಿದ್ದರಿಂದ ನೀನು ನನ್ನನ್ನೂ ನನ್ನ ರಾಜ್ಯವನ್ನೂ ಮಹಾಪಾತಕಕ್ಕೆ ಒಳಪಡಿಸಿದಿ?** "ತಪ್ಪು" ಎಂಬುದಕ್ಕೆ ಬಳಸಲಾಗಿರುವ ಪದವು חֲטָאָה *(ಚಾಟಾಹ)*, ಇದು "ಅಪರಾಧ" ಅಥವಾ "ದುಷ್ಕೃತ್ಯ" ಎಂಬ ಆಲೋಚನೆಯನ್ನು ನೀಡಬಲ್ಲದು, ಯಾಕೆಂದರೆ ಪ್ರಾಚೀನ ಮಧ್ಯಪ್ರಾಚ್ಯದಲ್ಲಿನ ಬರಹಗಳಲ್ಲಿ ವ್ಯಭಿಚಾರ ಮಾಡಿದವನನ್ನು ಒಂದು "ದೊಡ್ಡ ದುಷ್ಕೃತ್ಯ" ಮಾಡಿದ "ಅಪರಾಧಿ" ಎಂದು ಕಾಣಲಾಗುತ್ತಿತ್ತು.[5] ಒಂದು ಅರ್ಥದಲ್ಲಿ, ಅಬೀಮೆಲೆಕನು ಹೀಗೆ ಕೇಳುವವನಾಗಿದ್ದನು, "ನನ್ನ ಮತ್ತು ನನ್ನ ಜನರ ಮೇಲೆ ಅಂಥ ಕೃತ್ಯವನ್ನು ಮಾಡಿದವರೆಂಬ ಅಪರಾಧವನ್ನು ಬರಮಾಡುವದಕ್ಕೆ ನಾನು ಯಾವ ಪಾಪ ಅಥವಾ ದುಷ್ಕೃತ್ಯವನ್ನು ನಿನಗೆ ವಿರುದ್ಧವಾಗಿ ಮಾಡಿದೆನು?"

ಮತ್ತೊಂದಾವರ್ತಿ, ಉತ್ತರಿಸುವದಕ್ಕೆ ಅಬ್ರಹಾಮನಿಗೆ ಸಮಯವು ಕೊಡಲ್ಪಡಲಿಲ್ಲ, ಯಾಕೆಂದರೆ ಮೂಲಭೂತ ಪಾಪವು ಆತನದ್ದೇ ಆಗಿತ್ತೆಂಬುದು ಸ್ಪಷ್ಟವಾಗಿದೆಯಷ್ಟೆ. ಆತನು ಸುಳ್ಳು ಹೇಳಿದ ನಂತರದಲ್ಲಿ ಮಾತ್ರವೇ ಅಬೀಮೆಲೆಕನು ಸಾರಳನ್ನು

ಉಪಪತ್ನಿಯರಲ್ಲೊಬ್ಬಳಾಗಿ ತೆಗೆದುಕೊಂಡಿದ್ದನು. ಆದದರಿಂದ, ಅರಸನು ತನ್ನ ಕಠೋರವಾದ ಗದರಿಕೆಯನ್ನು ಮುಂದುವರೆಸಿದನು: **ಮಾಡಬಾರದ ಕಾರ್ಯಗಳನ್ನು ನನಗೆ ಮಾಡಿದೆ.** ಖಂಡಿತವಾಗಿಯೂ, ಇದು ಸತ್ಯವೇ ಆಗಿತ್ತು. ಅಬ್ರಹಾಮ ಮತ್ತು ಸಾರಳು ಸೇರಿಕೊಂಡು ಫರೋಹನಿಗೆ ವಂಚನೆ ಮಾಡಿದ ಸಂದರ್ಭದಲ್ಲಿ ಐಗುಪ್ತರಿಗಿದ್ದಂಥ ಕುಖ್ಯಾತಿಯು ಅಬೀಮೆಲೆಕನಿಗಾಗಲಿ ಅಥವಾ ಆತನ ಜನರಿಗಾಗಲಿ ಇರಲಿಲ್ಲ. ಈ ಅರಸನು ಪರದೇಶಿಗೆ ದಯೆಯನ್ನು ತೋರಿಸಿದ್ದನು, ಆಹಾರ ಮತ್ತು ನೀರಿನ ವಿಷಯದಲ್ಲಿ ಅಬ್ರಹಾಮನ ಹಿಂಡುಗಳು ಮತ್ತು ಮಂದೆಗಳು ಸೇರಿದಂತೆ ಬೃಹತ್ ಪರಿವಾರವು ಅಬೀಮೆಲೆಕನ ದೇಶದ ಜನರೊಂದಿಗೆ ಪೈಪೋಟಿಯನ್ನು ಮಾಡುವ ಅವಕಾಶವಿದ್ದಾಗ್ಯೂ ಇವರಿಗೆ ದೇಶದಲ್ಲಿ ವಾಸಿಸಲು ಅವನು ಅನುಮತಿ ಕೊಟ್ಟಿದ್ದನು. ಪ್ರತಿಯಾಗಿ ಅಪರಿಚಿತನು ಸೌಜನ್ಯದಿಂದ ನಡೆದುಕೊಳ್ಳುವನು ಮತ್ತು ತನ್ನ ಕಡೆಗೆ ಹಾಗೂ ತನ್ನ ರಾಜ್ಯದ ಕಡೆಗೆ ಕಾಳಜಿಯನ್ನು ತೋರಿಸುವನೆಂದು ಎದುರು ನೋಡಿದ್ದನು.

**ವಚನ 10.** ನೀತಿಯುಳ್ಳ ಕೋಪಭರಿತನಾಗಿ, ತನ್ನ ಪ್ರಶ್ನೆಗೆ **ಅಬ್ರಹಾಮನು** ಉತ್ತರಿಸಬೇಕೆಂದು ಅರಸನು ಬೇಡಿಕೆ ಇಟ್ಟನು: **ನೀನು ಯಾವ ಉದ್ದೇಶದಿಂದ ಈ ಕಾರ್ಯವನ್ನು ಮಾಡಿದೆ.** ಈ ಪ್ರಶ್ನೆಯಲ್ಲಿ "ಯಾವ ಉದ್ದೇಶದಿಂದ" ಎಂಬುದು רָאָה (*ರಾಹಾ*, "ನೋಡು") ಎಂಬ ಇಬ್ರಿಯ ಪದಕ್ಕೆ ಉತ್ತಮ ಅನುವಾದವಾಗಿರುವದಿಲ್ಲ. KJVಯು ಇದಕ್ಕೆ ಅಕ್ಷರಶಃ ಅನುವಾದವನ್ನು ನೀಡುತ್ತದೆ: "ನೀನು ... ಏನು ನೋಡಿದೆ?" ಇದಕ್ಕೆ ಇನ್ನೂ ಸ್ವಲ್ಪ ವಿವರಣೆಯು ಅಗತ್ಯವಿರುತ್ತದೆ. NRSVಯು "ನೀನು ... ಏನು ಯೋಚಿಸುತ್ತಿದ್ದೀ?" ಎಂಬುದರೊಂದಿಗೆ ವಾಕ್ಯದ ಅರ್ಥಕ್ಕೆ ಹೆಚ್ಚು ಸಮೀಪವಾಗಿರುತ್ತದೆ. John T. Willisನು ಅಕ್ಷರಶಃ ಅನುವಾದ ಮತ್ತು ಪ್ರಶ್ನೆಯನ್ನು "ನೀನು ಏನನ್ನು (ಎದುರು-) ನೋಡಿದೆ?" ಎಂದು ಅನುವಾದಿಸುವ ಮೂಲಕ ಇಬ್ರಿಯ ವಾಕ್ಯವನ್ನು ಭಾವಾನುವಾದಗೊಳಿಸುವದರ ನಡುವೆ ಸಮತೋಲನವನ್ನು ಕಾಪಾಡಿಕೊಂಡು ಅತ್ಯುತ್ತಮ ಕೆಲಸವನ್ನು ಮಾಡಿರುವಂತೆ ಕಾಣಿಸುತ್ತದೆ. ಸರಳವಾಗಿ ಹೇಳುವದಾದರೆ, ಅಬೀಮೆಲಕನು ಹೀಗೆ ಕೇಳುತ್ತಿದ್ದಾನೆ, "ನೀನು ಈ ಸುಳ್ಳನ್ನು ಹೇಳುವಂತೆ ಕಾರಣವಾಗುವದಕ್ಕೆ ಏನು ನಡೆಯಬಹುದೆಂದು ನೀನು ಎದುರು ನೋಡಿದೆ?"[6] ಈ ಇಡೀ ಘಟನಾವಳಿಯು ಅಬೀಮೆಲೆಕನಿಗೆ ಅವನ ಮನೆಯವರು ಮತ್ತು ಅವನ ಸೇವಕರ ಎದುರಿನಲ್ಲಿ ಒಂದು ದೊಡ್ಡ ಮುಜುಗರವನ್ನುಂಟು ಮಾಡಿತ್ತು. ಸಹಜವಾದ ಪರಿಸ್ಥಿತಿಗಳಡಿಯಲ್ಲಿ, ಬಹುಶಃ ಇದರಿಂದ ಅಬ್ರಹಾಮನು ತನ್ನ ಪ್ರಾಣವನ್ನು ಈಡು ಕೊಡಬೇಕಾಗುತ್ತಿತ್ತು. ದೇವರ ಎಚ್ಚರಿಕೆಯ ನಿಮಿತ್ತವಾಗಿ ಅರಸನು ಅಬ್ರಹಾಮನನ್ನು ದಂಡಿಸುವದಕ್ಕೆ ಹೆದರಿದ್ದನಾದರೂ, ಆತನು ತನ್ನ ಸಂಬಂಧ ಪಟ್ಟ ಪ್ರಶ್ನೆಗಳಿಗೆ ಅಬ್ರಹಾಮನಿಂದ ಏನಾದರೂ ಉತ್ತರವನ್ನು ಪಡೆದುಕೊಳ್ಳುವ ಹೊರತು ಆತನನ್ನು ಕ್ಷಮಿಸಬಾರದೆಂದು ದೃಢನಿರ್ಧಾರ ಮಾಡಿಕೊಂಡಿದ್ದನು. ಅಂತಿಮವಾಗಿ, ಅರಸನು ತಪ್ಪು ಮಾಡಿದವನನ್ನು ಮಾತಾಡುವಂತೆ ಅನುಮತಿಸಿದನು.

**ವಚನ 11. ಅಬ್ರಹಾಮನು** ತನ್ನ ಸಮರ್ಥನೆಯನ್ನು ಆರಂಭಿಸಿದ ವೇಳೆ, ತನ್ನನ್ನು ಅಪರಾಧಿಯೆಂದು ಹೇಳಿಕೊಂಡನು. ಮೊದಲನೆಯದಾಗಿ, ತಾನು **ಈ ಸ್ಥಳದವರು ದೇವರ ಭಯವಿಲ್ಲದವರಾಗಿ ನನ್ನ ಹೆಂಡತಿಯ ನಿಮಿತ್ತ ನನ್ನನ್ನು ಕೊಂದಾರೆಂದು** ನೆನಸಿ ಅಬೀಮೆಲೆಕ ಮತ್ತು ಆತನ ಜನರ ಬಗ್ಗೆ ಮುಂಚೆಯೇ ತೀರ್ಪು ನೀಡಿ ಬಿಟ್ಟನು ಎಂಬುದನ್ನು ಒಪ್ಪಿಕೊಳ್ಳುತ್ತಾನೆ (12:11, 12; 20:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಜನರಿಗೆ ಮಾನವ ಪ್ರಾಣದ ಬಗ್ಗೆ ಕಳಕಳಿಯಿಲ್ಲದವರು ಅಥವಾ ಮೂಲಭೂತವಾದ ನೈತಿಕ ತತ್ವಗಳಿಲ್ಲದವರು ಎಂದು ತಪ್ಪಾಗಿ

ಭಾವಿಸಿಕೊಂಡಿದ್ದನು. ಮೂಲಪಿತೃವು ಸ್ವತಃ ಕಾನಾನಿನಲ್ಲಿ ಹೊಂದಿದ್ದ ಅನುಭವವು ಆತನಿಗೆ ಈ ಭಯಗಳು ಬಾರದಂತೆ ಮಾಡಿರಬೇಕಿತ್ತು, ಯಾಕೆಂದರೆ ಆತನು ಅಲ್ಲಿ ಹೆಚ್ಚುಕಡಿಮೆ ಇಪ್ಪತ್ತೈದು ವರ್ಷಗಳಿಂದ ಜೀವಿಸುತ್ತಿದ್ದಾಗ್ಯೂ ಈ ವಿಧವಾದ ಅಪಾಯವನ್ನು ಹಿಂದೆ ಯಾವತ್ತೂ ಎದುರಿಸಿರಲಿಲ್ಲ. ಈ ಇಡೀ ಕಾಲಾವಧಿಯೊಳಗೆ ಆತನಿಗೆ ಎದುರಾದ ಒಂದೇ ಒಂದು ಶಾರೀರಿಕ ಗಂಡಾಂತರದ ಬಗ್ಗೆ ಮಾತ್ರವೇ ನಮಗೆ ತಿಳಿದಿರುತ್ತದೆ: ಮೂಡಣದಿಂದ ಬಂದ ನಾಲ್ಕು ಮಂದಿ ಅರಸರ ಆಕ್ರಮಣವೇ. ಆ ವೇಳೆಯಲ್ಲಿ ಸಹ, ದೇವರು ಅಬ್ರಹಾಮನಿಗೆ ಮತ್ತು ಆತನ ಖಾಸಗಿ ಸೈನ್ಯ, ಜೊತೆಗೆ ಅಮೋರಿಯ ಸಹೋದರರ ಸೇನೆಗಳಿಗೆ ಈ ಆಕ್ರಮಣಕಾರರ ಮೇಲೆ ಸುಲಭವಾದ ಜಯವನ್ನು ಒದಗಿಸಿದ್ದನಷ್ಟೆ (14:13-16).

ಈ ದುಃಖಕರ ಘಟನೆಯನ್ನು ಆದಿಕಾಂಡದ ಕಥನದಲ್ಲಿನ ವಿಶಾಲವಾದ ಸನ್ನಿವೇಶದಲ್ಲಿ ನೋಡುವದಾದರೆ, ದೇವರು ಆತನನ್ನು ಮೆಸಪೊತಾಮ್ಯದಿಂದ ಕರೆದು ಆತನಿಗೆ ಬೃಹತ್ ಮಂದೆಗಳನ್ನು, ಹಿಂಡುಗಳನ್ನು, ಮತ್ತು ಐಶ್ವರ್ಯಗಳನ್ನು ಕೊಟ್ಟು ಹೇಗೆ ಆಶೀರ್ವದಿಸಿದ್ದಾನೆಂಬುದನ್ನು ಅಬ್ರಹಾಮನು ಮರೆತು ಹೋಗಿದ್ದನೆಂಬಂತೆಯೇ ಕಾಣಿಸುತ್ತದೆ (14:14); ವಾಸ್ತವಿಕದಲ್ಲಿ, ಆತನು ಕಾನಾನಿನಲ್ಲಿಯೇ ಅತ್ಯಂಥ ಬೃಹತ್ ಖಾಸಗಿ ಸೈನ್ಯವನ್ನು ಹೊಂದಿದವನಾಗಿ ಇದ್ದಿರಬಹುದು. ಹಾಗಾದರೆ ಆತನು ಅಷ್ಟೊಂದು ಭಯ ಪಟ್ಟಿದ್ದನೋ? ಆತನು ತನ್ನ ನಂಬಿಕೆಯನ್ನು ಕಳೆದುಕೊಂಡಿದ್ದನೋ? "ಅಬ್ರಾಮನೇ, ಭಯಪಡಬೇಡ, ನಾನು ನಿನಗೆ ಗುರಾಣಿಯಾಗಿದ್ದೇನೆ; ನಿನಗೋಸ್ಕರ ಅತ್ಯಧಿಕ ಬಹುಮಾನವು ಇಟ್ಟದೆ" (15:1) ಎಂದು ದೇವರು ಹೇಳಿದ ಮಾತುಗಳಲ್ಲಿ ಆತನಿಗೆ ಈಗ ನಂಬಿಕೆಯೇ ಇರಲಿಲ್ಲವೋ? ಇನ್ನು ಒಂದು ವರ್ಷದೊಳಗೆ ಆತನಿಗೆ ಮತ್ತು ಸಾರಳಿಗೆ ಒಬ್ಬ ಮಗನು ಹುಟ್ಟುವನು, ಮತ್ತು ಆಕೆಯು ಅರಸುಗಳಿಗೆ ಮತ್ತು ಜನಾಂಗಗಳಿಗೆ ಜನ್ಮ ನೀಡುವಳು ಎಂಬುದಾಗಿ ಇತ್ತೀಗಷ್ಟೇ ದೇವರು ನೀಡಿದ ವಾಗ್ದಾನವನ್ನು ಆತನು ವಿಶ್ವಾಸಲಿಲ್ಲವೋ (17:16, 17; 18:10-14)? ಇದು ನಿಶ್ಚಯವಾಗಿಯೂ ಅಬ್ರಹಾಮನ ಜೀವಿತದಲ್ಲಿ ಒಂದು ದುರಸ್ಥೆಯ ಗಳಿಗೆ ಆಗಿತ್ತು. ಸಾರಳನ್ನು ಅಬೀಮೆಲೆಕನಿಗೆ ಹೆಂಡತಿಯಾಗಿ ಕೊಡುವ ಮೂಲಕ, ಆಕೆಗೆ ಹುಟ್ಟುವ ಮಗನು ಈತನ ಹೊಟ್ಟೆಯಿಂದಲೇ ಬರುವನು ಎಂಬುದಾಗಿ ದೇವರು ನೀಡಿದ್ದ ವಾಗ್ದಾನವನ್ನು ಈತನು ಇಕ್ಕಟ್ಟಿಗೆ ಸಿಲುಕಿಸುವದಕ್ಕೆ ಸಿದ್ಧನಾಗಿದ್ದನು.

**ವಚನ 12.** ಅಬ್ರಹಾಮನ ಎರಡನೆಯ ವಾದವು ಕಾರಣಗಳನ್ನು ಹೇಳುವಿಕೆ ಮತ್ತು ವಂಚನೆಯ ಒಂದು ಕರುಣಾಜನಕ ಉದಾಹರಣೆಯಾಗಿರುತ್ತದೆ. ಆತನು ತಾಂತ್ರಿಕ ಕಾರಣಗಳನ್ನು ಮುಂದಿಟ್ಟು ನಾನು ಸುಳ್ಳನ್ನು ಹೇಳಲಿಲ್ಲ ಎಂದು ವಾದಿಸುತ್ತಾ, ಹೀಗೆ ಹೇಳಿದನು, **ಅದಲ್ಲದೆ ಆಕೆ ನಿಜವಾಗಿ ನನ್ನ ತಂಗಿ ನನ್ನ ತಂದೆಯ ಮಗಳೇ; ಆದರೆ ನನ್ನ ತಾಯಿಯ ಮಗಳಲ್ಲ.** ಇದು ಅರ್ಧ-ಸತ್ಯವಾಗಿತ್ತು, ಆಕೆಯು ತನಗೆ **ಹೆಂಡತಿಯಾದಳು** ಎಂಬ ವಿಷಯವನ್ನು ತನಗೆ ಅನುಕೂಲವಾಗುವಂತೆ ಕೈ ಬಿಟ್ಟಿದ್ದನು. ಮೂಲಪಿತೃವಿನ ಹೇಳಿಕೆಯಲ್ಲಿ ಭಾಗಶಃ ಮಾತ್ರವೇ ಸತ್ಯವಿತ್ತು ಮತ್ತು ಅರಸನನ್ನು ವಂಚಿಸುವ ಉದ್ದೇಶವಿತ್ತಾದ್ದರಿಂದ ಅದು ನಿಶ್ಚಯವಾಗಿಯೂ ಒಂದು ಸುಳ್ಳು ಆಗಿತ್ತು.

**ವಚನ 13.** ಅಬ್ರಹಾಮನು ನೀಡಿದ ಸಮರ್ಥನೆಯ ಕೊನೆಯ ಭಾಗವು ಸಹ ದುರ್ಬಲವಾಗಿತ್ತು. ಇದು ಅವರು ರೂಢಿಯಾಗಿ ಅನುಸರಿಸುತ್ತಿದ್ದ ಒಂದು ಸಂಗತಿಯಾಗಿತ್ತೆಂಬುದಾಗಿ ಒಂದು ಅಚ್ಚರಿಯಾದ ಅರಿಕೆಯನ್ನು ಆತನು ಮಾಡಿದನು. ಆತನು ಸಾರಳಿಗೆ ಹೀಗೆ ಬೋಧಿಸಿದ್ದನು, **ನಾವು ಹೋಗುವ ಎಲ್ಲಾ ಸ್ಥಳಗಳಲ್ಲಿಯೂ ನನಗೆ ನಿನ್ನಿಂದ ಒಂದು ಉಪಕಾರವಾಗಬೇಕು, ಏನಂದರೆ ನೀನು ನನ್ನನ್ನು ಅಣ್ಣನೆಂಬದಾಗಿ ಹೇಳಬೇಕು.** ಈ

ವಾಕ್ಯಭಾಗದಲ್ಲಿ "ಉಪಕಾರ" ಎಂಬುದಾಗಿ ಅನುವಾದಿಸಲ್ಪಟ್ಟಿರುವ ಪದವು חֶסֶד *(ಚೆಸೆಡ್)*, ಅನೇಕ ಸಾರಿ ಇದರ ಅರ್ಥವು "ಸ್ಥಿರವಾದ ಪ್ರೀತಿ" (NRSV), "ಪ್ರೀತಿಪೂರ್ವಕ ಕರುಣೆ" (NASB), ಅಥವಾ "ಪ್ರೀತಿ" (NIV) ಎಂದಾಗಿರುತ್ತದೆ. ಈ ಕೊನೆಯಲ್ಲಿರುವ ಅರ್ಥವು ಅಬ್ರಹಾಮನ ಮನಸ್ಸಿನಲ್ಲಿ ಇದ್ದಿರಬಹುದಾಗಿದೆ, ಅದಕ್ಕನುಗುವಾಗಿ ಆತನ ತಾತ್ಪರ್ಯವು ಏನಾಗಿತ್ತೆಂದರೆ, "ನೀನು ನನಗೆ ನಿನ್ನ ಪ್ರೀತಿಯನ್ನು *[ಚೆಸೆಡ್]* ತೋರಿಸುವ ರೀತಿಯು ಇದೇ ಆಗಿದೆ: ನಾನು ನಿನ್ನ ಅಣ್ಣನಷ್ಟೆ ಎಂದು ಹೇಳಿಕೊಳ್ಳುವ ಮೂಲಕವೇ." ಈ ವಿಧವಾದ ವಂಚನೆಯು ವಾಕ್ಯದಲ್ಲಿ ಬರೆಯಲ್ಪಟ್ಟಿರುವ ಮೊದಲ ಸಂದರ್ಭವೆಂದರೆ ಅವರು ಐಗುಪ್ತದಲ್ಲಿ ಫರೋಹನ ಮುಂಚೆ ನೀಡಿದ ಸಾಕ್ಷಿಯೇ (12:10-20), ಆದರೆ ಅವರು ಈ ವಿಧವಾದ ಕಳ್ಳಾಟವನ್ನು ಬೇರೆ ಸಂದರ್ಭಗಳಲ್ಲಿಯೂ ಬಳಸಿರಬಹುದಾಗಿದೆ ಎಂಬುದು ಅಬ್ರಹಾಮನ ಹೇಳಿಕೆಯಿಂದ ಸೂಚಿಸಲ್ಪಡುತ್ತದೆ. ಹೇಗೂ, ಕಥಾನಿರೂಪಕನು ಈ ಎರಡು ಕಥೆಗಳನ್ನಷ್ಟೆ ಬರೆಯುತ್ತಾನಾದ್ದರಿಂದ, ಇದೇ ವಿಧವಾಗಿ ಬೇರೆ ಘಟನೆಗಳು ನಡೆದಿರಬಹುದೆಂಬುದು ಕೇವಲ ಉಹಾಪೋಹವಾಗಿರುತ್ತದಷ್ಟೆ.

**ವಚನ 14** ಅಬ್ರಹಾಮ ಮತ್ತು ಸಾರಳು ತಮ್ಮ ಸಂಬಂಧದ ಬಗ್ಗೆ ಫರೋಹನಿಗೆ ಮೊದಲ ಸಾರಿ ಸುಳ್ಳು ಹೇಳಿದ ಸಮಯದಲ್ಲಿ, ಈ ವಂಚನೆಯು ಕಂಡು ಹಿಡಿಯಲ್ಪಡುವದಕ್ಕೆ ಮುಂಚೆ ಮೂಲಪಿತೃವು ಅರಸನಿಂದ ಬೆಲೆಬಾಳುವ ಉಡುಗೋರೆಗಳನ್ನು ಪಡೆದುಕೊಂಡಿದ್ದನು (12:16). ಈ ಸಂದರ್ಭದಲ್ಲಿ, **ಅಬೀಮೆಲೆಕನು** ಸಾರಳು ನಿಜವಾಗಿಯೂ ಮೂಲಪಿತೃವಿನ ಹೆಂಡತಿ ಎಂಬುದನ್ನು ತಿಳಿದುಕೊಂಡ ಬಳಿಕ **ಅಬ್ರಹಾಮನಿಗೆ** ಬೆಲೆಬಾಳುವ ಉಡುಗೋರೆಯಾಗಿ **ಕುರಿದನಗಳನ್ನೂ ದಾಸದಾಸಿಯರನ್ನೂ** [ಗುಲಾಮರನ್ನು] **ಕೊಟ್ಟನು.** ಪ್ರಾಚೀನ ಮಧ್ಯಪ್ರಾಚ್ಯದ ಕಾನೂನುಗಳಿಗೆ ಹೊಂದಿಕೆಯಾಗುವಂತೆ, ಫರೋಹನು ಮೂಲಪಿತೃವಿಗೆ ನೀಡಿದ ಉಡುಗೋರೆಗಳಲ್ಲಿ, ತಂದೆಗೆ, ಅಥವಾ ತಂದೆಯು ಮರಣಿಸಿದ್ದರೆ ಅವಳ ಅಣ್ಣನಿಗೆ ಕೊಡಲಾಗುತ್ತಿದ್ದ ವಧುದಕ್ಷಿಣೆಯನ್ನು ಒಳಗೊಂಡಿತ್ತು ಎಂದು ತೋರುತ್ತದೆ. ಗೆರಾರಿನ ಅರಸನು ಅಬ್ರಹಾಮನಿಗೆ ನೀಡಿದ ಉಡುಗೋರೆಗಳು ಪರಿಹಾರವಾಗಿ ಕೊಡಲ್ಪಟ್ಟವುಗಳಾಗಿದ್ದವು, ಅಬೀಮೆಲೆಕನು ತನಗೆ ಗೊತ್ತಿಲ್ಲದೆ ಸಾರಳನ್ನು ತನ್ನ ಉಪಪತ್ನಿಯರಲ್ಲೊಬ್ಬಳನ್ನಾಗಿ ತೆಗೆದುಕೊಳ್ಳುವ ಮೂಲಕ ಉಂಟು ಮಾಡಿದ್ದ ಹಾನಿಗಳಿಗೋಸ್ಕರ ಅವನಿಗೆ ಪರಿಹಾರ ರೂಪದಲ್ಲಿ ಕೊಡಲ್ಪಟ್ಟವುಗಳಾಗಿದ್ದವು. ಬಳಿಕ ಅರಸನು **ಅವನ ಹೆಂಡತಿಯಾದ ಸಾರಳನ್ನು ಅವನಿಗೆ ಒಪ್ಪಿಸಿದನು**.

**ವಚನ 15. ಅಬೀಮೆಲೆಕನ** ಔದಾರ್ಯತೆಯು ಅಬ್ರಹಾಮನಿಗೆ ಅವನು ಹೇಳುವ ಮಾತಿನಲ್ಲಿ ಒತ್ತಿ ತೋರಿಸಲ್ಪಟ್ಟಿದೆ: **ಇಗೋ ನನ್ನ ದೇಶವು; ಇದರೊಳಗೆ ನಿನಗೆ ಇಷ್ಟವಿದ್ದ ಕಡೆಯಲ್ಲಿ ವಾಸಮಾಡಬಹುದು.** ಈ ಅನ್ಯಧರ್ಮಿಯ ಅರಸನು - ಈ ಪರದೇಶಿಯ ಕೈಯಲ್ಲಿ ವಂಚಿಸಲ್ಪಟ್ಟು, ವೇದನೆಗೊಂಡು, ಮತ್ತು ಅವಮಾನಕ್ಕೀಡಾಗಿದ್ದವನು - ಈತನನ್ನು ತನ್ನ ಪರಿವಾರದ ಸಮೇತವಾಗಿ ಇಷ್ಟಪಡುವ ಸ್ಥಳದಲ್ಲಿ ನೆಲೆಗೊಳ್ಳಬಹುದು ಎಂದು ಹೇಳಿದ್ದು ನಿಜಕ್ಕೂ ಆಶ್ಚರ್ಯಕರವಾಗಿರುತ್ತದೆ. ಈತನ ಪ್ರತಿಕ್ರಿಯೆಯು ಐಗುಪ್ತದ ಫರೋಹನು ಅಬ್ರಹಾಮ ಮತ್ತು ಸಾರಳ ವಿಷಯದಲ್ಲಿ ನಡೆದುಕೊಂಡ ರೀತಿಗೆ ಬಹಳ ತದ್ವಿರುದ್ಧವಾಗಿರುತ್ತದೆ, ಆತನು ಇವರನ್ನು ತನ್ನ ದೇಶದಿಂದ ಶೀಘ್ರವೇ ಹೊರಗೆ ಕರೆದೊಯ್ಯುವಂತೆ ತನ್ನ ಸೈನಿಕರಿಗೆ ಆಜ್ಞಾಪಿಸಿದ್ದನು (12:20). ಅಬ್ರಹಾಮನಿಗೆ ಅಷ್ಟೊಂದು ಸೌಜನ್ಯತೆಯನ್ನು ತೋರಿಸಿದ್ದಕ್ಕೆ ಕಾರಣವು ಏನೆಂದರೆ ತನಗೆ ಮತ್ತು ತನ್ನ ಜನರಿಗೆ ಶಾರೀರಿಕ ಸ್ವಸ್ಥತೆ ಸಿಕ್ಕುವುದು ಅಬ್ರಹಾಮನ ಪ್ರಾರ್ಥನೆ ಮತ್ತು ಸದ್ಭಾವನೆಯ ಮೇಲೆ

ಅವಲಂಭಿತವಾಗಿತ್ತೆಂದು ಅರಸನಿಗೆ ಗೊತ್ತಿತ್ತು.

**ವಚನ 16.** ಬಳಿಕ ಅಬೀಮೆಲೆಕನು **ಸಾರಳ** ಕಡೆಗೆ ತಿರುಗಿಕೊಂಡು ತಿಳಿಸಿದ್ದೇನೆಂದರೆ, ಎಲ್ಲಾ ಪಶುಗಳು ಮತ್ತು ದಾಸರಷ್ಟೇ ಅಲ್ಲದೆ (20:14), ಆತನು ಆಕೆಯ **ಅಣ್ಣನಿಗೆ ಸಾವಿರ ರೂಪಾಯಿ** [ಬೆಳ್ಳಿನಾಣ್ಯಗಳನ್ನು][7] **ಕೊಟ್ಟಿದ್ದೇನೆ**. ಅಬೀಮೆಲೆಕನು ಅಬ್ರಹಾಮನನ್ನು ಸಾರಳ "ಗಂಡ" ಎಂಬುದರ ಬದಲಾಗಿ ಆಕೆಯ "ಅಣ್ಣ" ಎಂದು ಕರೆದನು. ಈ ಉಲ್ಲೇಖದಲ್ಲಿರುವ ತೀಕ್ಷ್ಣವಾದ ಟೀಕೆಯುಳ್ಳ ವಿಪರ್ಯಾಸವನ್ನು ತಪ್ಪದೆ ಗ್ರಹಿಸಿಕೊಳ್ಳತಕ್ಕದ್ದು: ಅಬ್ರಹಾಮ ಮತ್ತು ಸಾರಳು ಸೇರಿಕೊಂಡು ತನ್ನನ್ನು ವಂಚಿಸಿದ್ದಕ್ಕಾಗಿ ಅರಸನು ಈಗಲೂ ಬೇಸರದಲ್ಲಿದ್ದನು. ಆತನು ಕೊಟ್ಟ ಬೆಳ್ಳಿಯ ವಿಷಯದಲ್ಲಿ ನೋಡುವದಾದರೆ, ಆತನು ಹೀಗೆ ಹೇಳಿದನು, **ನಡೆದದ್ದನ್ನು ನಿನ್ನ ಕಡೆಯವರು ಲಕ್ಷ್ಯಕ್ಕೆ ತೆಗೆದುಕೊಳ್ಳದಂತೆ ಇದು ಪ್ರಾಯಶ್ಚಿತ್ತವಾಗಿರಲಿ; ನೀನು ಮಾನಸ್ಥಳೆಂದು ಇದರಿಂದ ಎಲ್ಲರೂ ತಿಳಿದುಕೊಳ್ಳುವರು.**

"ಪ್ರಾಯಶ್ಚತ್ತವಾಗಿರಲಿ" ಎಂಬುದಕ್ಕಿರುವ ಇಬ್ರಿಯ ಪದವು כְּסוּת עֵינַיִם *(ಕೆಶುಥ್ ಐನಾಯಿಮ್)*, ಇದರರ್ಥವು ಅಕ್ಷರಶಃ "ಕಣ್ಣಿನ ಮಸುಕು" (KJV) ಎಂದಾಗಿದೆ. NIVಯು ಇದನ್ನು "ತಪ್ಪನ್ನು ಮುಚ್ಚಿ ಹಾಕಿ" ಎಂದು ಅನುವಾದಿಸುತ್ತದೆ, ಅಬ್ರಹಾಮನ ತಂಡದಲ್ಲಿರುವವರೆಲ್ಲರ ಕಣ್ಣಿಗೆ ಕಾಣದಂತೆ ಪರಿಸ್ಥಿತಿಯು ಮುಸುಕಾಗಿ ಮಾಡಲ್ಪಡಲಿ ಇಲ್ಲವಾದರೆ ಅರಸನು ಸಾರಳನ್ನು ಉಪಪತ್ನಿಯಾಗಿ ತೆಗೆದುಕೊಂಡಿದ್ದನೆಂದು ಕೇಳಿಸಿಕೊಳ್ಳುವಂತಾದೀತು ಎಂಬುದನ್ನು ಸೂಚಿಸುತ್ತದೆ. ಅಬೀಮೆಲೆಕನಿಗೆ ಯಾವ ದುರಾಲೋಚನೆಯು ಇರಲಿಲ್ಲ, ಯಾಕೆಂದರೆ ಆಕೆಯು ಅಬ್ರಹಾಮನ ಹೆಂಡತಿ ಎಂಬುದು ಆತನಿಗೆ ಗೊತ್ತಿರಲಿಲ್ಲ. ಅಷ್ಟುಮಾತ್ರವಲ್ಲದೆ, ಆಕೆಯು ಆತನ ಮನೆಯಲ್ಲಿರುವ ವೇಳೆ ಅರಸನು ಲೈಂಗಿಕವಾಗಿ ಆಕೆಯನ್ನು ಮುಟ್ಟಿರಲಿಲ್ಲ. ಆದದರಿಂದ, ಈ ಅನುಭವದಿಂದಾಗಿ ಯಾರೊಬ್ಬರೂ ಸಾರಳನ್ನು ಕುಚೋದ್ಯವಾಗಲಿ ಅಥವಾ ನಿಂದನೆಯನ್ನಾಗಲಿ ಮಾಡಕೂಡದು. ಆ ಅರ್ಥದಲ್ಲಿ, ಆಕೆಯು "ತಪ್ಪಿಲ್ಲದವಳೆಂದು ಸಂಪೂರ್ಣವಾಗಿ ಸಾಭಿತಾಗಿತ್ತು" (NEB), ಯಾವ ದೋಷೂವೂ ಇಲ್ಲದವಳಾಗಿದ್ದಳು.

**ವಚನಗಳು 17, 18.** ಅಬೀಮೆಲೆಕನು ತಾನು ಮಾಡಿದ್ದ ತಪ್ಪುಗಳನ್ನು ಸರಿಪಡಿಸುವದಕ್ಕಾಗಿ ತೆಗೆದುಕೊಂಡು ಸಮರ್ಪಕವಾದ ಕ್ರಮಗಳಿಂದಾಗಿ ಅಹಿತಕರವಾದ ಘಟನಾವಳಿಯು ಅಂತ್ಯಗೊಂಡಿತ್ತು. ತರುವಾಯ **ಅಬ್ರಹಾಮನು ದೇವರನ್ನು ಬೇಡಿಕೊಳ್ಳಲು ದೇವರು ಅಬೀಮೆಲೆಕನನ್ನೂ ಅವನ ಪತ್ನಿಯನ್ನೂ ದಾಸಿಯರನ್ನೂ** ಬಂಜೆತನದಿಂದ **ವಾಸಿಮಾಡಿದ್ದರಿಂದ ಅವರಿಗೆ ಮಕ್ಕಳಾದರು**. ಹಿಂದಿನ ವಚನದಲ್ಲಿ "ಅಣ್ಣ" ಎಂಬುದು ಹೇಗೆ ವ್ಯಂಗ್ಯವಾಗಿ ಬಳಸಲ್ಪಟ್ಟಿತೋ, ಹಾಗೆಯೇ ಇಲ್ಲಿ ವ್ಯಂಗ್ಯದ ಇನ್ನೊಂದು ಉದಾಹರಣೆಯು ಕಾಣಿಸಿಕೊಳ್ಳುತ್ತದೆ. ಅಬ್ರಹಾಮನು ದೇವರಿಗೆ ಪ್ರಾರ್ಥಿಸಿದನು, ಮತ್ತು ಅದರ ಫಲಿತವಾಗಿ ಅಬೀಮೆಲೆಕನ ಮನೆಯಲ್ಲಿದ್ದ ಮಹಿಳೆಯರು ಪುನಃ ಮಕ್ಕಳನ್ನು ಹಡೆಯಲು ಶಕ್ತರಾದರು. ಅವರ ಬಂಜೆತನಕ್ಕೆ ಕಾರಣವು ಏನಾಗಿತ್ತೆಂದರೆ **ಅಬ್ರಹಾಮನ ಹೆಂಡತಿಯಾದ ಸಾರಳ ನಿಮಿತ್ತ ಯೆಹೋವನು ಅಬೀಮೆಲೆಕನ ಮನೆಯಲ್ಲಿದ್ದ ಸ್ತ್ರೀಯರೆಲ್ಲರೂ ಬಂಜೆಯರಾಗುವಂತೆ ಮಾಡಿದ್ದನು**. ಇಷ್ಟೊಂದು ವರ್ಷಗಳಿಂದ ಮದುವೆಯಾಗಿ ಮತ್ತು ತಮ್ಮ ನಂಬಿಕೆಯು ಪರೀಕ್ಷಿಸಲ್ಪಟ್ಟಿರುವಾಗಲೂ ಸಾರಳ ಗರ್ಭವು ಬಂಜೆಯಾಗಿರುವ ವೇಳೆ (16:2), ಅನ್ಯಧರ್ಮಿಯ ಅರಸನು ಮತ್ತು ಆತನ ಹೆಂಡತಿಯರ ಪರವಾಗಿ ಅಬ್ರಹಾಮನು ಮಾಡಿದ ಪ್ರಾರ್ಥನೆಯು ಏಕೆ ಪರಿಣಾಮಕಾರಿಯಾಗಿತ್ತು?

ಮುಂದಿನ ಅಧ್ಯಾಯದಲ್ಲಿ, ಅವರ ಹತಾಶೆಯಿಂದ ಕಳೆದಿದ್ದ ಅಷ್ಟೊಂದು ವರ್ಷಗಳು

ಕೊನೆಗೂ ಮಹಾ ಸಂತೋಷಕ್ಕೆ ದಾರಿ ಮಾಡಿ ಕೊಟ್ಟಿದ್ದವು. ದೇವರು ಸಾರಳ ಗರ್ಭವನ್ನು ಸಹ ತೆರೆದನು, ಆಕೆಯ ವೃದ್ಧಾಪ್ಯದಲ್ಲಿ ವಾಗ್ದಾನ ಮಾಡಲ್ಪಟ್ಟ ಮಗುವಿಗೆ ಜನ್ಮ ಕೊಡುವಂತೆ ಅನುಮತಿಸಿದ್ದನು.

## ಅನ್ವಯಿಸುವಿಕೆ

### ಸುಳ್ಳಾಡುವದರಿಂದಾಗುವ ಅಪಾಯ (ಅಧ್ಯಾಯ 20)

*ಸುಳ್ಳಾಡುವುದು ಒಂದು ಪಾಪವಾಗಿದ್ದು ಜನರು ಅನೇಕ ಸಾರಿ ಅದು ಅವಶ್ಯಕವಾಗಿರುತ್ತದೆಂದು ಕಾರಣಗಳನ್ನು ಹೇಳುತ್ತಿರುತ್ತಾರೆ.* ಅನೇಕ ಸಮಯಗಳಲ್ಲಿ, ತಮ್ಮ ಸ್ವ-ಹಿತಾಸಕ್ತಿ ಅಥವಾ ಕ್ಷೇಮಕ್ಕಾಗಿ ಸುಳ್ಳು ಅಗತ್ಯವೆಂದು ನಂಬುದರಿಂದಾಗಿ ವ್ಯಕ್ತಿಗಳು ಸುಳ್ಳಾಡುತ್ತಾರೆ. ಅದೇ ರೀತಿಯಲ್ಲಿಯೇ, ಅವರು ಒಂದು ಅಸತ್ಯವನ್ನು ಬೇರೊಬ್ಬ ವ್ಯಕ್ತಿ ಅಥವಾ ಇಡೀ ಸಮುದಾಯದ ಒಳಿತಿಗಾಗಿ ಆಗಿದೆ ಎಂದು ಕಾರಣಗಳನ್ನು ನೀಡಬಹುದು. ಅನೇಕ ಸುಳ್ಳುಗಳನ್ನು ಈ ವಿಧದಲ್ಲಿ ಸರಿಯೆಂದು ಸಮರ್ಥಿಸಬಹುದಾದ್ದರಿಂದ, ಸುಳ್ಳಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳುವುದು ಸುಲಭವಾಗಿರುತ್ತದೆ. ಅಬ್ರಹಾಮ ಮತ್ತು ಸಾರಳರು ಆ ಅಭ್ಯಾಸವನ್ನು ನುರಿತಗೊಳಿಸಿಕೊಂಡಿದ್ದರು, ಗಂಡ ಮತ್ತು ಹೆಂಡತಿಯರೆಂಬ ತಮ್ಮ ನಿಜವಾದ ಗುರುತಿನ ಕುರಿತು ನಿಯತಕ್ರಮವಾಗಿ ಸುಳ್ಳು ಹೇಳುತ್ತಿದ್ದರು. 20:13ರಲ್ಲಿ, ಅಬೀಮೆಲೆಕನ ಮುಂದೆ ಮೂಲಪಿತೃವು ಒಪ್ಪಿಕೊಂಡಿದ್ದೇನೆಂದರೆ, ಅನೇಕ ವರ್ಷಗಳ ಹಿಂದೆ ಮೆಸಪೊತಾಮ್ಯದಲ್ಲಿದ್ದ "ತಂದೆಯ ಮನೆಯನ್ನು ಬಿಟ್ಟು ದೇಶಾಂತರಕ್ಕೆ ಹೋಗಬೇಕೆಂದು" ಯೆಹೋವನ ಆಜ್ಞೆಯನ್ನು ಪಡೆದುಕೊಂಡ ಬಳಿಕ, ಆತನು ತನ್ನ ಹೆಂಡತಿಗೆ ಹೀಗೆ ಉಪದೇಶಿಸಿದ್ದನು ಎಂಬುದೆ: "ನಾವು ಹೋಗುವ ಎಲ್ಲಾ ಸ್ಥಳಗಳಲ್ಲಿಯೂ ನೀನು ನನ್ನನ್ನು ಅಣ್ಣನೆಂಬದಾಗಿ ಹೇಳಬೇಕು."

ಈ ಯೋಜನೆಯನ್ನು ಅವರು ಬಳಸಿದ್ದರ ಕುರಿತಾಗಿ ಎರಡು ಉದಾಹರಣೆಗಳನ್ನಷ್ಟೆ ದಾಖಲಿಸುತ್ತದಾದರೂ (12:11-13; 20:2), ಅವರು ಈ ತಂತ್ರವನ್ನು ಮೊದಲು ಬಳಕೆ ಮಾಡಿದಂದಿನಿಂದ ಮೊದಲ್ಗೊಂಡು ಈ ಮಧ್ಯಂತರದ ಇಪ್ಪತ್ತು ನಾಲ್ಕು ವರ್ಷಗಳಲ್ಲಿ ನಡೆದಿರಬಹುದಾದ ಇತರ ಘಟನೆಗಳನ್ನು ಕಥಾನಿರೂಪಕನು ಬಯಲುಗೊಳಿಸದೆ ಇರಬಹುದು. ಅಬ್ರಹಾಮನು ಸಾರಳ ಹಿತಕ್ಕಿಂತಲೂ ಮುಖ್ಯವಾಗಿ ಸ್ವಹಿತವನ್ನು ನೋಡಿಕೊಂಡನಾದ್ದರಿಂದ ಈ ವಿಧವಾದ ಸುಳ್ಳಾಡುವಿಕೆಯನ್ನು ನ್ಯಾಯವೆಂದು ಸಮರ್ಥಿಸಿಕೊಂಡಿರಬಹುದು. ಎರಡೂ ಪ್ರಕರಣಗಳಲ್ಲಿ, ಅಂಥ ಸುಳ್ಳನ್ನು ಹೇಳಿದ್ದಕ್ಕೆ ಆತನು ನೀಡಿದ ಸಮರ್ಥನೆಯು ತನ್ನ ಪ್ರಾಣವನ್ನು ಉಳಿಸಿಕೊಳ್ಳುವದೇ ಆಗಿತ್ತು (12:12; 20:11), ಇದರಿಂದ ಆತನಿಗೆ ಏನಾದರೂ ಸಂಭವಿಸಿದ್ದಲ್ಲಿ ಆ ಹೊಣೆಗಾರಿಕೆಯು ಹೆಂಡತಿಯ ಮೇಲೆ ಬರುವದಾಗಿತ್ತು. ಅದರ ಜೊತೆಗೆ, ತಾನು ಹೇಳುವ ಸುಳ್ಳು ಫರೋಹ, ಅಬೀಮೆಲೆಕ, ಅಥವಾ ಅವರ ಜನರ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂಬ ಬಗ್ಗೆ ಆತನು ಚಿಂತೆ ಮಾಡಲಿಲ್ಲ.

ಅಬ್ರಹಾಮ ಮತ್ತು ಸಾರಳರು ತಮ್ಮನ್ನು ತೊಡಗಿಸಿಕೊಂಡಿದ್ದ ಸುಳ್ಳಾಡುವಿಕೆಯ ಸ್ವಭಾವವು ಒಂದು ಅರ್ಧ-ಸತ್ಯವನ್ನು ಹೇಳುವಿಕೆ ಆಗಿತ್ತು; ಹೇಗೂ, ಅದು ಯಾವ ಸತ್ಯವನ್ನೂ ಒಳಗೊಂಡಿರದ ಸುಳ್ಳಿನಷ್ಟೇ ವಿನಾಶಕಾರಿ ಆಗಿತ್ತು. ಮಿಥ್ಯದೊಂದಿಗೆ ಒಂದಿಷ್ಟು ಸತ್ಯವು ಮಿಶ್ರಣಗೊಳಿಸಲ್ಪಟ್ಟರೆ ಅದು ಸುಳ್ಳನ್ನು ಹೆಚ್ಚು ಹಿತಕರವೆಂಬಂತೆ ಮತ್ತು ಮೋಸಕರವಾಗಿ ಮಾಡುತ್ತದೆ. ಈ ಕೆಳಗಿನ ಕಥೆಗಳಲ್ಲಿ ಉದಾಹರಣೆಗಳನ್ನು ಕಾಣಬಹುದು: ಸೈತಾನನು ಏದೆನ್

ತೋಟದಲ್ಲಿ ಹವ್ವಳನ್ನು (ಮತ್ತು ಆದಾಮನನ್ನು) ವಂಚಿಸಿದ್ದು (2:17; 3:1-13); ಹೇಬೆಲನನ್ನು ಕೊಲೆ ಮಾಡಿದ ಬಳಿಕ ಕಾಯಿನನು ಅಪ್ರಾಮಾಣಿಕವಾಗಿ ದೇವರಿಗೆ ಉತ್ತರಿಸಿದ್ದು (4:8, 9); ಮತ್ತು ಸಭೆಯ ಮತ್ತು ಕರ್ತನ ಮುಂದೆ ಅನನೀಯ ಹಾಗೂ ಸಪ್ಫೈರಳರು ಸುಳ್ಳುಗಳನ್ನು ಹೇಳಿದ್ದು (ಅಪೊಸ್ತಲರ ಕೃತ್ಯಗಳು 5:1-11).

ಮನುಷ್ಯನಿಗೆ ಯಾವಾಗಲೂ ಸುಳ್ಳಾಡಬೇಕೆಂಬ ಒಲವು ಇದ್ದೇ ಇತ್ತು. ಅದು ದಶಾಜ್ಞೆಗಳಲ್ಲಿ (ವಿಮೋಚನಕಾಂಡ 20:16), ಪರಿಶುದ್ಧತೆಯ ವಿಧಿಯಲ್ಲಿ (ಯಾಜಕಕಾಂಡ 19:11, 12), ಯೇಸುವಿನ ಬೋಧನೆಗಳಲ್ಲಿ (ಮತ್ತಾಯ 19:18), ಮತ್ತು ಆದಿ ಸಭೆಯಲ್ಲಿ ನಿಷೇಧಿಸಲ್ಪಟ್ಟಿತು (ಎಫೆಸ 4:25; ಕೊಲೊಸ್ಸೆ 3:8, 9; ಯಾಕೋಬ 3:14). ಇಬ್ರಿಯ 12:1ರ ಮಾತುಗಳಲ್ಲಿ ಹೇಳುವದಾದರೆ, ಸುಳ್ಳಾಡುವುದು ನಮಗೆ ಸುಲಭವಾಗಿ "ಹತ್ತಿಕೊಳ್ಳುವ" ಒಂದು ಪಾಪ ಆಗಿರುತ್ತದೆ, ಅಬ್ರಹಾಮನಿಗೂ ಅದು ಹಾಗೆಯೇ ಹತ್ತಿಕೊಂಡಿತ್ತು. ಇದು ತನಗೆ ರೂಢಿಯಾಗಿದ್ದ ಅಭ್ಯಾಸವಾಗಿತ್ತೆಂದು ಮೂಲಪಿತೃವು ಒಪ್ಪಿಕೊಂಡ (20:13) ಪ್ರಕಾರವಾಗಿ ಇದು ನಮಗೊಂದು ರೂಢಿಯಾದ ಅಭ್ಯಾಸವಾಗುವಂತೆ ಅನುಮತಿಸಬಾರದು.

*ಸುಳ್ಳಾಡುವುದರ ಬೇರುಗಳು ಅನೇಕ ಸಾರಿ ನಂಬಿಕೆಯ ಕೊರತೆಯಲ್ಲಿರುತ್ತವೆ.* ಶಾಸ್ತ್ರಗಳಲ್ಲಿ ವಿಶ್ವಾಸಿಗಳಿಗೆ ತಂದೆ ಎಂದು ಪ್ರಶಂಸಿಸಲ್ಪಟ್ಟಿರುವ ಅಬ್ರಹಾಮನು (ರೋಮಾ 4:11, 16), ಅನೇಕ ಸಾರಿ ತನ್ನ ನಂಬಿಕೆಯ ವಿಷಯದಲ್ಲಿ ಹೋರಾಟವನ್ನು ಅನುಭವಿಸಿದನು. ದೇವರು ಆತನನ್ನು ಅನೇಕ ವರ್ಷಗಳ ವರೆಗೆ ಹಲವಾರು ವಿಧಗಳಲ್ಲಿ ಆಶೀರ್ವದಿಸಿದನು; ಆದಾಗ್ಯೂ ಆತನು ದೇವರನ್ನು ವಿಶ್ವಾಸಿ "ನಂಬುವವನಾಗಿ" ನಡೆಯುವದರ ಬದಲಾಗಿ "ನೋಡುವವನಾಗಿ" ನಡೆಯಲು ಪ್ರಯತ್ನಿಸಿದನು (2 ಕೊರಿಂಥ 5:7).

ದೇವರ ಸಹಾಯದೊಂದಿಗೆ, ಅಬ್ರಹಾಮನ ಬಳಿಯಲ್ಲಿದ್ದ ಯುದ್ಧವೀರರು ಮೂಡಣದಿಂದ ಬಂದ ನಾಲ್ಕು ಮಂದಿ ಅರಸರನ್ನು ಸೋಲಿಸಿದ್ದರು (14:14-20) ಮತ್ತು ಅಬೀಮೆಲೆಕನಿಂದ ಸಂಭವಿಸಬಹುದಾದ ದಾಳಿಯಿಂದ ನಿಶ್ಚಯವಾಗಿಯೂ ಅವನನ್ನು ಕಾಪಾಡಬಲ್ಲವರಾಗಿದ್ದರು. ಹಾಗಿದ್ದರೂ, ಅಬ್ರಹಾಮನು ದೇವರನ್ನು - ನಿಜವಾದ "ನಂಬಿಕೆಯ ಗುರಾಣಿ" ಆಗಿರುವವನನ್ನು (15:1; ಎಫೆಸ 6:16) - ವಿಶ್ವಾಸಿಸುವದರ ಬದಲಾಗಿ ಈ ಫಿಲಿಷ್ಟಿಯದ ಅರಸ ಮತ್ತು ಆತನ ಸೈನ್ಯಕ್ಕೆ ಹೆದರಿದವನಾಗಿ ಸುಳ್ಳನ್ನು ಹೇಳಿದ್ದನು. ಆತನು ಇಷ್ಟೊಂದು ಸುದೀರ್ಘ ಕಾಲ ಅಷ್ಟು ಸಮೃದ್ಧಿಯಾಗಿ ಆಶೀರ್ವದಿಸಿದ್ದ *ಎಲ್ ಶದ್ದಾಯ* ("ಸರ್ವಶಕ್ತ ದೇವರು"; 17:1) ಆಗಿರುವವನನ್ನು ವಿಶ್ವಾಸಿಸುವದಕ್ಕೆ ಮರೆತು ಹೋಗಿದ್ದನು.

ಕ್ರಿಸ್ತನ ಶಿಷ್ಯರು ಇದೇ ವಿಧವಾದ ಅನುಭವವನ್ನು ಹೊಂದಿದ್ದರು. ಅವರಿಗೆ ತಮ್ಮ ವೃತ್ತಿಗಳನ್ನು ತೊರೆದು ಬಿಟ್ಟು ಫಿಲಿಷ್ಟಿಯ ದೇಶದಲ್ಲೆಲ್ಲಾ ಆತನನ್ನು ಹಿಂಬಾಲಿಸುವಷ್ಟು ನಂಬಿಕೆಯಿತ್ತು. ಆತನು ಸ್ವಸ್ಥತೆಯುಂಟು ಮಾಡುವ ಮಹತ್ಕಾರ್ಯಗಳನ್ನು ನಡಿಸಿದಾಗ ಅದನ್ನು ನೋಡಿ ಅವರ ನಂಬಿಕೆಯು ಬೆಳೆಯಿತು. ಹೇಗೂ, ಗಲಿಲಾಯದ ಸಮುದ್ರದಲ್ಲಿನ ಬಿರುಗಾಳಿಯ ಮಧ್ಯದಲ್ಲಿ, ಅವರು ನಿರೀಕ್ಷೆಯನ್ನು ಬಿಟ್ಟು ಬಿಟ್ಟರು. ಅವರಿಗಿದ್ದ ಅಲ್ಪ ನಂಬಿಕೆಯ ನಿಮಿತ್ತ ಯೇಸುವು ಅವರನ್ನು ಗದರಿಸಿದನು (ಮಾರ್ಕ 4:40).

ಇನ್ನೊಂದು ಸಂದರ್ಭದಲ್ಲಿ, ಕರ್ತನು ಹೇಳಿದ್ದೇನೆಂದರೆ ಅವರ ನಂಬಿಕೆಯು ಬಹಳ ಅಲ್ಪವಾಗಿದ್ದು, ಅದು "ಒಂದು ಸಾಸಿವೆ ಕಾಳಿನಷ್ಟು" ಹೆಚ್ಚಾಗುವದಾದರೆ ಅವರು ನಿಜಕ್ಕೂ ಮಹತ್ಕಾರ್ಯಗಳನ್ನು ಮಾಡಬಲ್ಲರು ಎಂಬುದೆ (ಮತ್ತಾಯ 17:20). ಕರ್ತನಲ್ಲಿ ಅವರು ಇಟ್ಟಿದ್ದ ವಿಶ್ವಾಸವು ಕರಗಿತ್ತು ಮತ್ತು ಮರೆಯಾಗುತ್ತಲಿತ್ತು. ಅದೇ ರೀತಿಯಲ್ಲಿಯೇ ಅಬ್ರಹಾಮನ ವಿಷಯದಲ್ಲಿ ಮತ್ತು ದೇವರ ಇನ್ನಿತರ ಶ್ರೇಷ್ಠ ಮನುಷ್ಯರ ವಿಷಯದಲ್ಲಿ ನಡೆದಿತ್ತು, ಮತ್ತು ನಮ್ಮ

ವಿಷಯದಲ್ಲಿಯೂ ಹಾಗೆಯೇ ಇರುತ್ತದೆ. ವಿಶ್ವಾಸಿಸುವ ಹೃದಯದಲ್ಲಿ ಸಹ ಒಂದಿಷ್ಟು ಅಪನಂಬಿಕೆಯು ಇರುವಂಥ ಅಪಾಯವು ಯಾವಾಗಲೂ ಇರುತ್ತದೆ (ಮಾರ್ಕ 9:24).

12:17-19ರಲ್ಲಿ ಫರೋಹ ಮತ್ತು ಐಗುಪ್ತದಲ್ಲಿನ ಆತನ ಮನೆಯವರ ಮೇಲೆ ಉಪದ್ರವಗಳನ್ನು ಬರಮಾಡಿದ ಅದೇ ಸುಳ್ಳು 20:9-13ರಲ್ಲಿ ಸ್ಥಳೀಯ ರಾಜನ ಮುಂದೆ ಬಂದು ತನ್ನ ವಂಚನೆಯ ಕುರಿತು ವಿವರಣೆ ಕೊಡುವಂತೆ ಕರೆಯಿಸಲ್ಪಡುವಂಥ ಮುಜುಗರಕ್ಕೆ ಅಬ್ರಹಾಮನನ್ನು ಈಡು ಮಾಡಿತ್ತು. ಆತನು ಏಕೆ ತನ್ನ ಪಾಠವನ್ನು ಕಲಿತುಕೊಂಡು ತನ್ನನ್ನು ಸುರಕ್ಷಿತವಾಗಿ ಕಾನಾನ್ ದೇಶಕ್ಕೆ ಕರೆದುಕೊಂಡು ಬಂದ ಮತ್ತು ಆತನು ತನಗೆ ಅವಿಧೇಯನಾದರೂ ಅಥವಾ ಭಾಗಶಃ ಮಾತ್ರವೇ ವಿಧೇಯನಾದಾಗ್ಯೂ ಅವನನ್ನು ಕಾಯ್ದು ಕಾಪಾಡಿದ ದೇವರಲ್ಲಿ ವಿಶ್ವಾಸವನ್ನು ಇಡಲಿಲ್ಲ?

*ಸುಳ್ಳಾಡುವುದು ಅನೇಕ ಸಾರಿ ಬಹಳಷ್ಟು ಕಷ್ಟವನ್ನುಂಟು ಮಾಡುತ್ತದೆ.* ಅಬ್ರಹಾಮನು ತನ್ನ ಸಂಪರ್ಕಕ್ಕೆ ಬರುವಂಥ ಜನರಿಗೆ ಆಶೀರ್ವಾದನಿಧಿಯಾಗಿ ಇರಬೇಕಾಗಿತ್ತು. ವಿಪರ್ಯಾಸವೆಂದರೆ, ಆತನು ತನ್ನ ಸುಳ್ಳುಗಳ ಕಾರಣದಿಂದ ತೊಂದರೆಯನ್ನುಂಟು ಮಾಡುವವನಾಗಿದ್ದನು. ಐಗುಪ್ತದಲ್ಲಿ, ಆಶೀರ್ವಾದಗಳ ಬದಲಾಗಿ, ಮೂಲಪಿತೃವು ಸಾರಳ ವಿಷಯದಲ್ಲಿ ಹೇಳಿದ ಸುಳ್ಳು ಫರೋಹನ ಮನೆಯವರ ಮೇಲೆ ಉಪದ್ರವಗಳನ್ನು ಬರಮಾಡಿತ್ತು (12:17). ಅದೇ ರೀತಿಯಲ್ಲಿಯೇ, ಗೆರಾರಿನಲ್ಲಿ ಅಬ್ರಹಾಮನು ಈ ಸುಳ್ಳನ್ನು ಹೇಳಿದ್ದನು, ಹೀಗೆ ಅಬೀಮೆಲೆಕನಿಗೆ ವೇದನೆ ಮತ್ತು ಮರಣದ ಗಂಡಾಂತರವನ್ನುಂಟು ಮಾಡಿದ್ದನು (20:3, 7, 17). ಅದು ಆತನ ಮನೆಯವರೊಳಗಿದ್ದ "ಸ್ತ್ರೀಯರೆಲ್ಲರೂ ಬಂಜೆಯರಾಗುವಂತೆ" ಕಾರಣವಾಗಿತ್ತು (20:18).

ಅದೇ ರೀತಿಯಲ್ಲಿಯೇ, ಹಿತ್ತೀಯನಾದ ಊರೀಯನನ್ನು ಯುದ್ಧಕಣದಿಂದ ಮನೆಗೆ ಹಿಂದಿರುಗಿ ಕರೆಯಿಸುವದಕ್ಕೆ ದಾವೀದನು ಮೋಸತನದಿಂದ ಸುಳ್ಳಾಡಿದನು, ಬತ್ಷೇಬಳ ಸಂಗಡ ತಾನು ಮಾಡಿದ ವ್ಯಭಿಚಾರವನ್ನು ಮುಚ್ಚಿಟ್ಟುಕೊಳ್ಳಲು ಹೇಳಿದ ಈ ಸುಳ್ಳು ಅಂತಿಮವಾಗಿ ಅವನ ಗೌರವಾನ್ವಿತ ಸೇವಕನ ಪ್ರಾಣವನ್ನು ತೆಗೆದು ಹಾಕಿತ್ತು (2 ಸಮುವೇಲ 11:1-27). ಅದರ ಜೊತೆಗೆ, ಆ ವ್ಯಭಿಚಾರದ ಸಂಬಂಧದೊಳಗಿಂದ ಹುಟ್ಟಿದ ಮಗುವು ಮರಣಿಸಿದ್ದನು, ಮತ್ತು ದಾವೀದನ ಮನೆಯನ್ನು ಬಿಟ್ಟು ಹೋಗಲೇ ಇಲ್ಲ (2 ಸಮುವೇಲ 12:10), ಏಕೆಂದರೆ ಆತನ ಮಕ್ಕಳು ಒಬ್ಬರಿಗೊಬ್ಬರ ವಿರುದ್ಧವಾಗಿ ಮತ್ತು ಅವರ ತಂದೆಗೆ ವಿರುದ್ಧವಾಗಿ ಅತ್ಯಾಚಾರ, ಕೊಲೆ, ನಾಗರೀಕ ಯುದ್ಧ, ಮತ್ತು ಯುದ್ಧದಿ ಮರಣ ಇವುಗಳ ರೂಪದಲ್ಲಿ ಪಾಪ ಮಾಡುತ್ತಲಿದ್ದರು (2 ಸಮುವೇಲ 13-18). ಹೀಗೆ, ಅರಸನು ತನ್ನ ವ್ಯಭಿಚಾರ ಮತ್ತು ಊರೀಯನ ಹೆಂಡತಿಯೊಂದಿಗಿನ ತನ್ನ ಸಂಬಂಧವನ್ನು ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದ್ದಕ್ಕಾಗಿ ಮತ್ತು ತನ್ನ "ವೀರರಲ್ಲಿ" ಒಬ್ಬನಾಗಿದ್ದವನನ್ನು ಕೊಲೆ ಮಾಡುವ ಮೂಲಕ ಬಾಧೆ ಮತ್ತು ಕಷ್ಟಗಳ ಒಂದು ದೊಡ್ಡ ಬೆಲೆಯನ್ನು ತೆತ್ತನು (2 ಸಮುವೇಲ 23:22, 39; 1 ಪೂರ್ವಕಾಲವೃತ್ತಾಂತ 11:26, 41).

ಜ್ಞಾನಿಯು ಒಂದು ಸಾರಿ ಹೀಗೆ ಹೇಳಿದನು, "ದೋಷಕರ ಮಾರ್ಗವು ಕಠಿಣವಾಗಿದೆ" (ಜ್ಞಾನೋಕ್ತಿ 13:15; KJV). "ದೋಷಕರ" ಎಂಬುದಕ್ಕಿರುವ ಇಬ್ರಿಯ ಪದವು ಒಂದು ಬಹುವಚನದ ಕೃದಂತವಾಗಿರುವ בָּגַד *(ಬಾಗಾದ)* ಎಂಬುದು, ಅದರರ್ಥವು "ಸಾಮಾನ್ಯ ಮಾನವ ಸಂಬಂಧಗಳಲ್ಲಿ ಅಪೇಕ್ಷಿಸಲಾಗುವ ಸಾಮಾಜಿಕ ಜವಾಬ್ದಾರಿಗಳಲ್ಲಿ ಠಕ್ಕತನದಿಂದ ನಡೆದುಕೋ" ಅಥವಾ "ಮೋಸತನದಿಂದ ವ್ಯವಹರಿಸು" ಎಂದಾಗಿರುತ್ತದೆ.[8] ಅಬ್ರಹಾಮನು ಸಾರಳ ವಿಷಯದಲ್ಲಿ ಅಬೀಮೆಲೆಕನಿಗೆ ಹೇಳಿದ ಸುಳ್ಳನ್ನು "ಈ ಸ್ಥಳದವರು ದೇವರ

ಭಯವಿಲ್ಲದವರಾಗಿದ್ದಾರೆ" (20:11) ಎಂಬ ತಾನೇ ಪೂರ್ವಕಲ್ಪನೆ ಮಾಡಿಕೊಂಡದ್ದರ ಮೇಲೆ ಆಧಾರಗೊಳಿಸಿದ್ದನು. ಸರಳವಾಗಿ ಹೇಳುವದಾದರೆ, ಅನ್ಯಧರ್ಮಿಯರು ಸಾಮಾನ್ಯ ಮಾನವ ಸಂಬಂಧಗಳನ್ನು ಗೌರವಿಸುವದಿಲ್ಲ ಎಂಬುದಾಗಿ ಭಾವಿಸಿಕೊಂಡನು.

ಸುಮಾರು ಇಪ್ಪತ್ತು-ನಾಲ್ಕು ವರ್ಷಗಳ ಕಾಲ, ಮೂಲಪಿತೃವು ಕಾನಾನ್ ದೇಶದಲ್ಲಿ ಜೀವಿಸಿದನು ಮತ್ತು, ನಮಗೆ ಗೊತ್ತಿರುವ ಪ್ರಕಾರವಾಗಿ, ಇನ್ನಿತರ ಸ್ಥಳೀಯ ಅರಸರೊಂದಿಗೆ ಈ ವಿಧವಾದ ಸಮಸ್ಯೆಯನ್ನು ಎದುರಿಸಿರಲಿಲ್ಲ. ಇವನಿಗೆ ಹೆಚ್ಚು ಮುಜುಗರವುಂಟಾಗುವ ರೀತಿಯಲ್ಲಿ, ಈ ಅನ್ಯಧರ್ಮಿಯ ಅರಸನು ಇವನಿಗಿಂತಲೂ ಅಧಿಕವಾಗಿ ಮದುವೆಯ ವಿಷಯದಲ್ಲಿ ಉನ್ನತವಾದ ನೈತಿಕ ಪ್ರಜ್ಞೆಯನ್ನು ಹೊಂದಿದ್ದನೆಂಬುದು ಅವನಿಗೆ ತಿಳಿದು ಬಂದಿತು. ಅಬೀಮೆಲೆಕನು "ಯಥಾರ್ಥಮನಸ್ಸಿನಿಂದಲೂ ಶುದ್ಧಹಸ್ತದಿಂದಲೂ" ಸಾರಳನ್ನು ತನ್ನ ಉಪಪತ್ನಿಯನ್ನಾಗಿ ತೆಗೆದುಕೊಂಡಿದ್ದೆನು ಎಂಬುದಾಗಿ ದೃಢಪಡಿಸುತ್ತಾನೆ (20:5). ಮೂಲಪಿತೃವೇ ಸಾರಳೊಂದಿಗೆ ತನಗಿದ್ದ ನಿಜವಾದ ಸಂಬಂಧದ ವಿಷಯವಾಗಿ ಸುಳ್ಳು ಹೇಳುವ ಮೂಲಕ ಮೋಸತನದಿಂದ ಮತ್ತು ಕುತಂತ್ರದಿಂದ ನಡೆದುಕೊಂಡಿದ್ದನು.

ಅಬ್ರಹಾಮನ ಸುಳ್ಳು ಎಲ್ಲಾ ಪೀಳಿಗೆಗಳಲ್ಲಿರುವ ದೇವರ ಜನರಿಗೆ ಒಂದು ಎಚ್ಚರಿಕೆಯಾಗಿ ನಿಲ್ಲುತ್ತದೆ: ನುಡಿ ಮತ್ತು ನಡೆಗಳಲ್ಲಿನ ಮೋಸತನವನ್ನು ಸಮರ್ಥಿಸಲು ಕಾರಣಗಳನ್ನು ನೀಡುವುದು ಸುಲಭವಾಗಿರುತ್ತದೆ. ದೇವರ ಮಕ್ಕಳು ಅನ್ಯಧರ್ಮಿಯರಿಗೆ ಸಹ ಆಘಾತವನ್ನುಂಟು ಮಾಡುವ ರೀತಿಯಲ್ಲಿ ಮಾತಾಡುವಂಥ ಮತ್ತು ನಡೆದುಕೊಳ್ಳುಂಥ ಶೋಧನೆಯಿಂದ ಹೊರತಾಗಿರುವವರಲ್ಲ. ಪೌಲನು ರೋಮಾಪುರದಲ್ಲಿರುವ ಕ್ರೈಸ್ತರಿಗೆ ಬರೆದ ವೇಳೆಯಲ್ಲಿ, ಆತನು ಯೆಹೂದಿ ಸಹೋದರರಲ್ಲಿ ಕೆಲವರನ್ನು ಕಠೋರ ಮಾತುಗಳಲ್ಲಿ ದೋಷಿಗಳೆಂದು ತೀರ್ಪು ಕೊಟ್ಟನು: "ನಿಮ್ಮ ದೆಸೆಯಿಂದ ಅನ್ಯಜನರಲ್ಲಿ ದೇವರ ನಾಮವು ದೂಷಣೆಗೆ ಗುರಿಯಾಗುತ್ತದೆಂದು ಬರೆದದೆಯಲ್ಲಾ" (ರೋಮಾ 2:24; ನೋಡಿರಿ 2 ಪೇತ್ರ 2:2). ಅದು ಹಳೆಯ ಒಡಂಬಡಿಕೆಯಲ್ಲಿ ಪ್ರವಾದಿಗಳು ದೇವರ ಜನರ ವಿರುದ್ಧವಾಗಿ ಮಾಡಿದ ದೋಷಾರೋಪಣೆ ಸಹ ಆಗಿತ್ತು (ಯೆಶಾಯ 52:5; ಯೆಹೆಜ್ಕೇಲ 36:20-23). ಆದದರಿಂದ, ಪೌಲನು ಹೇಳಿದ ಬುದ್ಧಿವಾದವು ಈಗಲೂ ಪ್ರಸ್ತುತವಾಗಿರುತ್ತದೆ: "ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ" (ರೋಮಾ 12:2).

*ಸುಳ್ಳಾಡುವುದು ಒಬ್ಬನ ಶೀಲವನ್ನು ಕೊರೆದು ಹಾಕುತ್ತದೆ ಮತ್ತು ಸಾಕ್ಷಿಯನ್ನು ನಿರರ್ಥಕಗೊಳಿಸುತ್ತದೆ.* ಸಾರಳು ತನ್ನ ತಂಗಿ ಎಂದು ಸುಳ್ಳು ಹೇಳುವದಕ್ಕೆ ಅಬ್ರಹಾಮನಿಗೆ ಕೇವಲ ಕೆಲವು ಕ್ಷಣಗಳು ಹಿಡಿದಿದ್ದವು; ಆ ಮಿಥ್ಯವನ್ನು ಅವರು ಪ್ರಯಾಣಿಸುವ ಸ್ಥಳಗಳಲ್ಲೆಲ್ಲಾ ಬಳಸುವದಕ್ಕೆ ಯೋಜನೆ ಮಾಡಿಕೊಂಡದ್ದಾಗಿತ್ತು (20:13), ಆದ್ದರಿಂದ ಅವರು ಅದನ್ನು ಪುನಃ ಬಳಸಿದ್ದರು. ಸುಳ್ಳು ಎಂಬುದು ಅವರು ಅನೇಕ ವರ್ಷಗಳ ಹಿಂದೆ ಬಿತ್ತಿದ್ದ ಬೀಜದ ಹಾಗಿತ್ತು. ಅದು ಬೆಳೆದು ಅವರ ಸ್ವಂತ ಜೀವಿತಗಳಲ್ಲಿ ಕಹಿಯಾದ ಫಲಗಳನ್ನು ಕೊಟ್ಟಿತ್ತು. ಅವರು ಅದನ್ನು ಇಸಾಕನೊಂದಿಗೆ ಸಹ ಹಂಚಿಕೊಂಡಿದ್ದರೆಂಬುದು ಸ್ಪಷ್ಟವಾಗುತ್ತದೆ ಯಾಕೆಂದರೆ ಅನಂತರದಲ್ಲಿ ಆತನು ಗೆರಾರಿನಲ್ಲಿ ಫಿಲಿಷ್ಟಿಯರ ಮಧ್ಯದಲ್ಲಿ ಪ್ರವಾಸಿಯಾಗಿದ್ದ ವೇಳೆ ಇದೇ ವಿಧವಾದ ಮೋಸತನವನ್ನು ಬಳಸಿದನು (26:6-11). ಬೇರೆಯವರು ನಮ್ಮೆಲ್ಲರ ಮೇಲೆ ಪ್ರಭಾವ ಬೀರುತ್ತಾರೆ; ಮತ್ತು ಭೂಮಿಯ ಮೇಲೆ ನಾವು ಇರುವಂಥ ಕಾಲದಲ್ಲಿ ಒಳ್ಳೇದಕ್ಕಾಗಲಿ

ಅಥವಾ ಕೆಟ್ಟದ್ದಕ್ಕಾಗಿ ಬೇರೆಯವರ ಮೇಲೆ ಪ್ರಭಾವವನ್ನು ಬೀರುತ್ತೇವೆ.

ಅಬ್ರಹಾಮ ಮತ್ತು ಸಾರಳು ಹೇಳಿದ ಸುಳ್ಳು ದುಬಾರಿಯಾಗಿತ್ತು, ಗಂಡ ಮತ್ತು ಹೆಂಡತಿಯರಾಗಿ ಅವರ ಸಂಬಂಧದ ಮೇಲೆ ಪರಿಣಾಮ ಬೀರಿತ್ತು. ಖಂಡಿತವಾಗಿಯೂ, ಐಗುಪ್ತದ ಮತ್ತು ಗೆರಾರಿನ ಅರಸರ ಮುಂದೆ, ಅವರ ಮನೆಯವರ ಮುಂದೆ, ಮತ್ತು ಅವರ ಅರಮನೆಯ ಅಧಿಕಾರಿಗಳ ಎದುರಿನಲ್ಲಿ ಅವರ ಸಾಕ್ಷಿಯನ್ನು ಸಹ ಹಾಳು ಮಾಡಿತ್ತು. ಅದರ ಜೊತೆಗೆ, ಮೂಲಪಿತೃವಿಗಿದ್ದ ಬೃಹತ್ ಪರಿವಾರದವರೊಳಗೆ ಕೆಲವರು ಸಹ ಆತನು ಮಾಡಿದ ಸಂಗತಿಯನ್ನು ಕೇಳಿಸಿಕೊಂಡಾಗ ತಮ್ಮ ಯಜಮಾನನ ಮೇಲಿದ್ದ ಗೌರವದಲ್ಲಿ ಸ್ವಲ್ಪ ಕಳೆದುಕೊಂಡಿರಬಹುದಾಗಿದೆ. ಒಟ್ಟಾರೆಯಾಗಿ, ತಾವು "ಸರ್ವಶಕ್ತ ದೇವರ" ಜನರಾಗಿ ಯಾರಾಗಿದ್ದೇವೆಂಬುದನ್ನು ಅವರು ನಿರಾಕರಿಸಿಕೊಂಡ ಹಾಗಾಗಿತ್ತು (17:1).

ಒಂದು ವಿಧದಲ್ಲಿ ತಾನು ಯಾವಾತನೊಂದಿಗೆ ನಡೆದಾಡಿ, ಜೀವಿಸಿ, ಮತ್ತು ಯಾವಾತನಲ್ಲಿ ತನ್ನ ನಂಬಿಕೆ ಹಾಗೂ ನಿಷ್ಠೆಯನ್ನು ಅರಿಕೆ ಮಾಡಿಕೊಂಡಿದ್ದನೋ ಆ ಯೇಸುವನ್ನು ಪೇತ್ರನು ಅನಂತರದಲ್ಲಿ ನಿರಾಕರಿಸಿದ ರೀತಿಯಲ್ಲಿಯೇ ಇತ್ತು (ಮತ್ತಾಯ 16:16; 26:33-35, 69-75). ವಾಸ್ತವಿಕದಲ್ಲಿ, ಇದು ಎಲ್ಲಾ ಶಿಷ್ಯರ ಅನುಭವವನ್ನೇ ಹೋಲುವಂತದ್ದಾಗಿತ್ತು. ಸೈನಿಕರು ಯೇಸುವನ್ನು ಬಂಧಿಸಿದ ವೇಳೆ, ಶಿಷ್ಯರೆಲ್ಲರೂ ತನ್ನ ಕ್ರಿಯೆಯಿಂದ ಆತನನ್ನು ನಿರಾಕರಿಸುವವರಾಗಿ, ಆತನು ಮುಂತಿಳಿಸಿದ್ದ ರೀತಿಯಲ್ಲಿಯೇ ಕತ್ತಲೆಯೊಳಗೆ ಪಲಾಯನ ಮಾಡಿದ್ದರು (ಮತ್ತಾಯ 26:31, 56). ಖಂಡಿತವಾಗಿಯೂ, ಕರ್ತನು ಅವರಿಗೆ "ಭೂಮಿಗೆ ಉಪ್ಪಾಗಿರುವಿರಿ" ಮತ್ತು "ಲೋಕಕ್ಕೆ ಬೆಳಕಾಗಿರುವಿರಿ" ಎಂಬುದಾಗಿ ಉಪದೇಶಿಸಿದ್ದನು (ಮತ್ತಾಯ 5:13-15). ಹಾಗಿದ್ದಾಗ್ಯೂ, ಆತನ ಬಂಧನ ಮತ್ತು ಆತನ ಪುನರುತ್ಥಾನದ ನಡುವಿನ ಕ್ಲುಪ್ತ ಕಾಲದ ವರೆಗೂ, ಅವರ ಉಪ್ಪು "ರುಚಿಯಿಲ್ಲದ್ದಾಗಿತ್ತು" (ಮತ್ತಾಯ 5:13) ಮತ್ತು ಅವರ ಬೆಳಕು ಗೋಚರಿಸದೆ ಇತ್ತು. ಅದು ಒಂದು ವಿಧದಲ್ಲಿ ಅವರು ತಮ್ಮ ಬೆಳಕನ್ನು "ಕೊಳಗದಲ್ಲಿ" ಬಚ್ಚಿಟ್ಟಿದ್ದಾರೋ ಎಂಬಂತಿತ್ತು (5:15). ಅವರು ಭಯಗೊಂಡಿದ್ದರು ಮತ್ತು ಭ್ರಮನಿರಸನಗೊಂಡವರಾಗಿ (ನೋಡಿರಿ ಲೂಕ 24:21), ಕತ್ತಲೆಯೊಳಗೆ ಮರೆಯಾಗಿ ಪಲಾಯನ ಮಾಡಿದರು (ಮತ್ತಾಯ 26:56) ಮತ್ತು "ಯೆಹೂದ್ಯರ ಭಯದಿಂದ" ಬಾಗಿಲುಗಳನ್ನು ಮುಚ್ಚಿಕೊಂಡು ಅಡಗಿಕೊಂಡಿದ್ದರು (ಯೋಹಾನ 20:19). ಹೇಗೂ, ಯೇಸುವು ಸತ್ತವರೊಳಗಿಂದ ಮಹಿಮಕರವಾಗಿ ಪುನರುತ್ಥಾನಗೊಂಡು ತನ್ನ ಶಿಷ್ಯರಿಗೆ ಪ್ರತ್ಯಕ್ಷಗೊಂಡದ್ದು ಅವರ ಜೀವಿತಗಳನ್ನು ಸಂಪೂರ್ಣ ಮಾರ್ಪಡಿಸಿತ್ತು, ಅವರ ನಂಬಿಕೆಯನ್ನು ಜೀವಂತಗೊಳಿಸಿ ಅವರಿಗೆ ಲೋಕವು ಎಂದಿಗೂ ಕೊಡಲಾಗದ ಮತ್ತು ಅವರಿಂದ ಎಂದಿಗೂ ಕಸಿದುಕೊಳ್ಳದಂಥ ಧೈರ್ಯ ಹಾಗೂ ನಿರೀಕ್ಷೆಗಳನ್ನು ಅವರಿಗೆ ಕೊಟ್ಟಿತು (ಯೋಹಾನ 20:19-31).

ವಾಸ್ತವಿಕದಲ್ಲಿ, ತನ್ನ ಕರೆಯುವಿಕೆಯಲ್ಲಿ ನಂಬಿಗಸ್ತನಾಗಿರುವದಕ್ಕೆ ಕರ್ತನ ಶಿಷ್ಯರು ತೆಗೆದುಕೊಂಡ ಸಮಯಕ್ಕಿಂತಲೂ ಹೆಚ್ಚು ಕಾಲವನ್ನು ಅಬ್ರಹಾಮನು ತೆಗೆದುಕೊಂಡಿದ್ದನು. ಆತನು ಮೆಸಪೋತಾಮ್ಯದ ಅನ್ಯಧರ್ಮಿಯತೆಯೊಳಗಿಂದ ನೇರವಾಗಿ ಹೊರಗೆ ಬಂದಿದ್ದನು ಮತ್ತು ತನ್ನ ಜೀವಿತದ ಬಹುಪಾಲು ಆತನು ಕಾನಾನ್ಯರ ರಾಜಕೀಯ ಹಾಗೂ ಧಾರ್ಮಿಕತೆಯ ಅಪಾಯವನ್ನೊಡ್ಡುವ ಜಗತ್ತಿನಲ್ಲಿ ಬದುಕುಳಿಯಬೇಕಾಗಿತ್ತೆಂಬುದನ್ನು ನಾವು ನೆನಪಿಟ್ಟುಕೊಳ್ಳತಕ್ಕದ್ದು. ಆತನು ವಿಶ್ವಾಸಿಗಳಿಗೆ ಪಿತೃವು ಆಗಬೇಕಾದರೆ, ಒಂದು ವಿಧದಲ್ಲಿ ದೈಹಿಕ ಪುನರುತ್ಥಾನವೇ ಆಗಬೇಕಾದ ಸ್ಥಿತಿ ಬಂದಿತ್ತು, ಅಂದರೆ ವಾಗ್ದಾನದ ಮಗುವಾದ ಇಸಾಕನು ಹುಟ್ಟಬೇಕಾದರೆ ತೊಂಭತ್ತೊಂಭತ್ತು ವರ್ಷದ ಆತನ ದೇಹ ಮತ್ತು

ಎಂಭತ್ತೊಂಭತ್ತು ವರ್ಷದ ಸಾರಳ ದೇಹವು ಅದ್ಭುತಕರವಾದ ರೀತಿಯಲ್ಲಿ ಪುನರುಜ್ಜೀವಗೊಳಿಸಲ್ಪಡುವುದು ಅಗತ್ಯವಾಗಿತ್ತು (ನೋಡಿರಿ ಆದಿಕಾಂಡ 21).

ಹಾಗಿದ್ದರೂ, ಅಷ್ಟೊಂದು ವರ್ಷಗಳ ವರೆಗೂ ಅಬ್ರಹಾಮನಲ್ಲಿದ್ದ ನಂಬಿಕೆಯ ಹೋರಾಟ ಮತ್ತು ಸುಳ್ಳು ಹೇಳುವ ಹಾಗೂ ವಂಚಿಸುವ ಪ್ರವೃತ್ತಿಯನ್ನು ದೇವರು ಏಕೆ ಸಹಿಸಿಕೊಂಡನು? ಈ ಮೇಲಿನ ಪ್ರಶ್ನೆಗೆ ಒಬ್ಬನು ಹೇಗೆ ಉತ್ತರಿಸಿದರೂ ಸರಿಯೇ, ಇನ್ನೊಂದು ಪ್ರಶ್ನೆಯು ಸ್ವಾಭಾವಿಕವಾಗಿಯೇ ಉದ್ಭವವಾಗುತ್ತದೆ. ಕೆಲವು ಸಾರಿ ಪಾಪ ಮಾಡುವಂತೆ ನಮ್ಮನ್ನು ನಡಿಸುವಂಥ ನಂಬಿಕೆ-ಹೋರಾಟ ಹಾಗೂ ನಮ್ಮ ದುರ್ಬಲತೆಯನ್ನು ದೇವರು ಏಕೆ ಸಹಿಸಿಕೊಂಡಿರುತ್ತಾನೆ? ಅಬ್ರಹಾಮನ ವಿಷಯದಲ್ಲಿ ಇದ್ದಿದ್ದ ರೀತಿಯಲ್ಲಿಯೇ, ತನ್ನ ಎಲ್ಲಾ ಜನರ ವಿಷಯದಲ್ಲಿ ದೇವರಿಗಿರುವ ಉದ್ದೇಶವು ಕೇವಲ ಆತ್ಮಗಳನ್ನು ರಕ್ಷಿಸಿ ಪರಲೋಕದ ನಿವಾಸಕ್ಕೆ ಸೇರಿಸುವದಷ್ಟೇ ಅಲ್ಲ ಆಗಿರುವದಿಲ್ಲ; ಬದಲಾಗಿ ಗುಣಸ್ವಭಾವವನ್ನು ನಿರ್ಮಿಸುವದು, ನಮ್ಮನ್ನು ಕ್ರಿಸ್ತನ ಸಾರೂಪ್ಯವುಳ್ಳವರಾಗಿ ಮಾರ್ಪಡಿಸುವುದು ಆಗಿರುತ್ತದೆ (2 ಕೊರಿಂಥ 3:18). ದೇವರು ನಮ್ಮನ್ನು ತನ್ನ ಸಂಗಡ, ಕ್ರಿಸ್ತನ, ಮತ್ತು ಒಬ್ಬರೊಂದಿಗೊಬ್ಬರು ನಿತ್ಯಕಾಲಕ್ಕೂ ಅನ್ಯೋನ್ಯತೆಯಿಟ್ಟುಕೊಳ್ಳುವಂತೆ ಸಿದ್ಧಗೊಳಿಸುವದು ದೇವರ ಬಯಕೆಯಾಗಿದೆ.

ಆದಾಮ ಮತ್ತು ಹವ್ವಳರು ನಿಷೇಧಿಸಲ್ಪಟ್ಟಿದ್ದ ಹಣ್ಣನ್ನು ತಿಂದ ಬಳಿಕ ಈಗಲೂ ಏದೆನ್ ತೋಟದಲ್ಲಿದ್ದರು, ಆದರೆ ಅವರ ಸೃಷ್ಟಿಕರ್ತನ ಮತ್ತು ಪರಸ್ಪರರ ಸಂಗಡವಿದ್ದ ಅವರ ಅನ್ಯೋನ್ಯತೆಯು ತಕ್ಷಣವೇ ಮುರಿಯಲಾರಂಭಿಸಿತ್ತು. ಅವರು ದೇವರಿಗೆ ಹೆದರಿದ್ದರು ಮತ್ತು ಅವನಿಗೆ ಮರೆಯಾಗಿ ಪೊದೆಗಳಲ್ಲಿ ಅಡಗಿಕೊಳ್ಳಲು ಪ್ರಯತ್ನಿಸಿದರು. ಆದಾಮನು ತನ್ನ ಅಪರಾಧಕ್ಕಾಗಿ ಹವ್ವಳ ಮೇಲೆ ಮತ್ತು ದೇವರ ಮೇಲೆ ಆರೋಪ ಮಾಡಿದನು, ಅದೇ ವೇಳೆಯಲ್ಲಿ ಹವ್ವಳು ಸೈತಾನನನ್ನು ಹೊಣೆಗಾರನನ್ನಾಗಿ ಮಾಡಿದಳು. ಪ್ರಥಮ ದಂಪತಿಗಳು ಈಗಲೂ ಭೂಲೋಕದ ಪರದೈಸಿನಲ್ಲಿದ್ದರಾದರೂ, ಅವರು ಇನ್ನು ಮೇಲೆ ಪರಸ್ಪರರೊಂದಿಗೆ ಅಥವಾ ದೇವರೊಂದಿಗೆ ಅಮೂಲ್ಯವೆಂದೆಣಿಸುವ ಆನಂದ, ಸಮಾಧಾನ, ಮತ್ತು ಭದ್ರತೆಗಳನ್ನು ಅನುಭವಿಸಲಿಲ್ಲ. ಬದಲಾಗಿ, ಅವರು ಅಪರಾಧಿಗಳಾದರು, ಭಯಗೊಂಡರು, ಮತ್ತು ಸಂತೋಷವಿಲ್ಲದ ಜನರಾದರು.

ಪಾಪವು ಮನುಷ್ಯನನ್ನು ತನ್ನ ಸೃಷ್ಟಿಕರ್ತನಿಂದ ಬೇರ್ಪಡಿಸುತ್ತದೆ ಮತ್ತು ಮನುಷ್ಯನಲ್ಲಿರುವ ದೇವರ ಸ್ವರೂಪವನ್ನು ಕೆಡಿಸುತ್ತದೆ. ದೇವರು ದೋಷವುಳ್ಳಂಥ ಜನರನ್ನು ಏಕೆ ಸಹಿಸಿಕೊಳ್ಳುತ್ತಲೇ ಇರುವನು? ಏಕೆಂದರೆ "ದೇವರು ಪ್ರೀತಿಸ್ವರೂಪಿ" (1 ಯೋಹಾನ 4:16). ಆತನ ಕೃಪೆಯ ಮೂಲಕವಾಗಿ, ಇಸ್ರಾಯೇಲ್ಯರು ಪಾಪ ಮಾಡಿದಾಗ ಆತನು ಅವರನ್ನು ಸಹಿಸಿಕೊಂಡನು. ಅವರನ್ನು ಲೋಕದಲ್ಲಿ ಆತನ ಸ್ವಭಾವ ಮತ್ತು ಗುಣಲಕ್ಷಣವನ್ನು ಪ್ರತಿಬಿಂಬಿಸುವ ಪರಿಶುದ್ಧ ಜನಾಂಗವಾಗಿ ಆಕಾರಗೊಳಿಸಬೇಕೆಂದು ಮತ್ತು ರೂಪಿಸಬೇಕೆಂದು ಬಯಸಿದ್ದನು (18:18, 19; ವಿಮೋಚನಕಾಂಡ 19:4-6). ಅದೇ ರೀತಿಯಲ್ಲಿಯೇ, ಆತನು ದೇವರ ಕೃಪೆಯಿಂದ ಇಂದು ಕ್ರೈಸ್ತರಲ್ಲಿ ಕೆಲಸ ಮಾಡುತ್ತಾನೆ. ನಮ್ಮ ಪಾಪಗಳು ಮತ್ತು ದೋಷಗಳ ಹೊರತಾಗಿಯೂ, ನಾವು ಅಬ್ರಹಾಮನ ಆತ್ಮಿಕ ಮಕ್ಕಳು ಮತ್ತು "[ಆತನ] ವಾಗ್ದಾನಕ್ಕನುಸಾರವಾಗಿ ಬಾಧ್ಯರೂ" ಆಗಿದ್ದೇವೆ (ಗಲಾತ್ಯ 3:29). ಕರ್ತನು ನಮ್ಮ ವಿಷಯವಾಗಿ ದೀರ್ಘಶಾಂತಿಯಿಂದ ಇದ್ದಾನೆ, ಅಬ್ರಹಾಮನ ವಿಷಯದಲ್ಲಿದ್ದ ರೀತಿಯಲ್ಲಿಯೇ ಆತನು ನಮ್ಮನ್ನು ಕ್ಷಮಿಸುವವನಾಗಿ ಮತ್ತು ಆಶೀರ್ವದಿಸುವವನಾಗಿ ಇದ್ದಾನೆ - ಪರಿಪೂರ್ಣ ನಂಬಿಕೆ ಅಥವಾ ಸಂಪೂರ್ಣ ವಿಧೇಯತೆಯ ಕಾರಣದಿಂದಲ್ಲ, ಆದರೆ ಆತನು ನಮ್ಮನ್ನು

ಕ್ರಿಸ್ತನಲ್ಲಿರುವವರಾಗಿ, ಆತನ ದೋಷವಿಲ್ಲದ ನೀತಿಯೆಂಬ ವಸ್ತ್ರವನ್ನು ಧರಿಸಿದವರೆಂದು ಕಾಣುವ ಕಾರಣದಿಂದಲೇ ಆಗಿದೆ (2 ಕೊರಿಂಥ 5:21; ಗಲಾತ್ಯ 3:26, 27).

---

ಅಡಿಟಿಪ್ಪಣಿಗಳು

[1]Eliezer D. Oren, "Gerar," in *The Anchor Bible Dictionary*, ed. David Noel Freedman (New York: Doubleday, 1992), 2:989–91. [2]ಕೀರ್ತನೆ 34ರ ಅಧಿಲೇಖನವು ಗತ್ ಊರಿನವನಾದ ಫಿಲಿಷ್ಟಿಯರ ಅರಸನನ್ನು "ಅಬೀಮೆಲೆಕ" (ಇದು ಒಂದು ರಾಜವಂಶದ ಬಿರುದು ಆಗಿರುವಂತೆ ಕಾಣುತ್ತದೆ) ಎಂದು ಕರೆಯುತ್ತದೆ, 1 ಸಮುವೇಲ 21:10-15 ವಚನಗಳು ಆತನನ್ನು "ಆಕೀಷ" (ಒಂದು ವೈಯಕ್ತಿಕ ಹೆಸರು) ಎಂದು ಕರೆಯುತ್ತವೆ. [3]2 ಪೂರ್ವಕಾಲವೃತ್ತಾಂತ 35:22ರ ಲೇಖಕನು ಹೇಳುವದೇನೆಂದರೆ ಒಳ್ಳೇಯ ಅರಸನಾದ ಯೋಷೀಯನು "ದೇವೋಕ್ತಿಯಾಗಿದ್ದ ನೆಕೋವಿನ ಮಾತಿಗೆ ಕಿವಿಗೊಡದೆ" ಹೋದದ್ದರಿಂದ ಮರಣಿಸಿದನು ಎಂಬುದೆ. [4]ಇಲ್ಲಿ ಅಬೀಮೆಲಕನಿಂದ ಬಳಸಲ್ಪಟ್ಟಿರುವ ಪದವು "ಸ್ವಾಮಿ" (אֲדֹנָי, *ಅಡೋನಾಯ್)*, ಆದರೆ 21:22, 23ರಲ್ಲಿ ಯಾದರೋ ಆತನು "ದೇವರು" (אֱלֹהִים, *ಎಲೋಹಿಮ್)* ಕುರಿತು ಮಾತಾಡಿದನು. ಇವುಗಳೊಳಗೆ ಯಾವ ಸಂದರ್ಭದಲ್ಲಿಯೂ ಆತನು "ಕರ್ತನು" ಅಥವಾ "ಯೆಹೋವ" (יהוה, *ಯಾಹು*) ಎಂಬ, ದೇವರಿಗಿರುವ ವೈಯಕ್ತಿಕ ಹೆಸರನ್ನು ಬಳಸಲಿಲ್ಲ. [5]Elaine Adler Goodfriend, "Adultery," in *The Anchor Bible Dictionary*, 1:82. ಮೋಶೆಯ ಧರ್ಮಶಾಸ್ತ್ರಕ್ಕನುಗುಣವಾಗಿ, ವ್ಯಭಿಚಾರವು ಮರಣದಂಡನೆಗೆ ಯೋಗ್ಯವಾದ ಅಪರಾಧವಾಗಿತ್ತು (ಯಾಜಕಕಾಂಡ 20:10; ಧರ್ಮೋಪದೇಶಕಾಂಡ 22:22). [6]John T. Willis, *Genesis*, The Living Word Commentary (Austin, Tex.: Sweet Publishing Co., 1979), 275–76. [7]NIVಯು "ಶೆಕೆಲಗಳು" ಎಂಬ ಪದವನ್ನು ಸೇರ್ಪಡೆಗೊಳಿಸುವ ಮೂಲಕ ಪ್ರಮಾಣವನ್ನು ಸ್ಪಷ್ಟಗೊಳಿಸುತ್ತದೆ. ಈ ಕಾಲದ ವೇಳೆ, ಒಂದು "ಶೆಕೆಲ್" ಎಂಬುದು ಒಂದು ಮುದ್ರೆಯಿರುವ ನಾಣ್ಯ ಎಂಬುದಕ್ಕಿಂತಲೂ ಒಂದು ತೂಕ ಆಗಿತ್ತು. [8]Louis Goldberg, "בָּגַד," in *TWOT*, 1:89–90.